ವ್ಯವಸ್ಥೆಯನ್ನು ಸಹ ಮಾಡಿದ್ದೀರಿ. ಆದರೆ ಈ ರೋಗ ಇಡೀ ತಾಲ್ಲೂಕಿನಲ್ಲಿಯೇ ಹರಡಿದೆ. ಆದರೆ ಈ ಖಾಯಿಲೆ ಬಗ್ಗೆ ನಿಮ್ಮ ಇಲಾಖಾಧಿಕಾರಿಗಳು ಕೆಲವು ಸೆಲೆಕ್ಟೆಡ್ ಏರಿಯಾಗಳಲ್ಲಿ ಮಾತ್ರ ಮುಂಜಾಗ್ರತಾ ಕ್ರಮವನ್ನು ತೆಗೆದುಕೊಂಡು ಕೆಲಸ ಮಾಡುತ್ತಿದ್ದಾರೆ. ಕೆಲವು ಕಡೆಗಳಲ್ಲಿ ಹಳ್ಳಿಗಳಲ್ಲಿ ಡಾಕ್ಟರ್‌ಗಳೇ ಇಲ್ಲ. ಉದಾಹರಣೆಗೆ ಹೇಳುವುದಾದರೆ, ಅಫ್ಜಲಪುರ ತಾಲ್ಲೂಕಿನಲ್ಲಿ ಸುಮಾರು ೨೦–೨೫ ಹಳ್ಳಿಗಳಲ್ಲಿ ಈ ರೋಗ ಹರಡಿದೆ. ಆದರೆ ಅಲ್ಲಿ ಯಾವ ಮುಂಜಾಗ್ರತಾ ಕ್ರಮವನ್ನು ಸಹ ನಿಮ್ಮ ಇಲಾಖಾಧಿಕಾರಿಗಳು ತೆಗೆದು ಕೊಂಡಿಲ್ಲವೆಂದು ವರದಿಗಳು ಬಂದಿವೆ. ಆದ್ದರಿಂದ ಮಾನ್ಯ ಮಂತ್ರಿಗಳು ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಂಡು ರೋಗ ಹರಡದಂತೆ ತಡೆಗಟ್ಟಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಮತ್ತು ಗುಲ್ಬರ್ಗಾ ಜಿಲ್ಲೆಗೆ ಸಾಕಷ್ಟು ಔಷಧಿಗಳನ್ನು ಒದಗಿಸಿಕೊಡಬೇಕು. ಅಲ್ಲಿಗೆ ಒಂದು ಮೊಬೈಲ್ ವ್ಯಾನ್ ಒದಗಿಸಿಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ಎಂ. ವೀರಯ್ಯಸ್ವಾಮಿ.—ಮಾನ್ಯ ಅಧ್ಯಕ್ಷರೇ, ಅಲ್ಲಿ ನನಗೆ ತಿಳಿದ ಪ್ರಕಾರ ಅಲ್ಲಿ ವಾಟರ್ ಕ್ಲೋರಿನೇಶನ್ ಆಗಿಲ್ಲ. ಅಲ್ಲಿನ ವಾಟರ್‌ನ್ನು ಪರೀಕ್ಷೆ ಮಾಡಿದಾಗ ಪಾಸಿಟೀವ್ ರಿಪೋರ್ಟ್ ಬಂದಿದೆ. ಆದ್ದರಿಂದ ಅಲ್ಲಿಗೆ ಕ್ಲೋರಿನ್ ಸಪ್ಲೈ ಮಾಡಬೇಕು. ಮಾನ್ಯ ಸದಸ್ಯರಾದ ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆಯವರು ಹೇಳಿದ ಹಾಗೆ ಅಲ್ಲಿಗೆ ಒಂದು ಮೊಬೈಲ್ ವ್ಯಾನ್ ಅನ್ನು ಕಳುಹಿಸಿಕೊಟ್ಟು ಎಲ್ಲಾ ಕಡೆಗಳಲ್ಲಿ ಡಾಕ್ಟರ್‌ಗಳನ್ನು ಹಾಕಬೇಕೆಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಇದರ ಜೊತೆಗೆ ಎಲ್ಲಾ ಜನರಿಗೂ ವ್ಯಾಕ್ಸಿನೇಶನ್ ಮಾಡಬೇಕು.

ಶ್ರೀ ಹೆಚ್. ಟಿ. ಕೃಷ್ಣಪ್ಪ.—ಮಾನ್ಯ ಅಧ್ಯಕ್ಷರೇ. ಸರ್ಕಾರದವರು ತೆಗೆದುಕೊಂಡಿರುವ ಕಾರ್ಯಕ್ರಮಗಳ ಬಗ್ಗೆ ನಾನು ಈಗಾಗಲೇ ವಿವರಣೆಯನ್ನು ಕೊಟ್ಟಿದ್ದೇನೆ. ಮತ್ತು ಡಾಕ್ಟರ್‌ಗಳನ್ನು ಒದಗಿಸಿ ಕೊಡಬೇಕೆಂದು ಹೇಳಿದ್ದಾರೆ. ಎಲ್ಲರಿಗೂ ವ್ಯಾಕ್ಸಿನೇಶನ್ ಮಾಡಬೇಕೆಂದು ಹೇಳಿದ್ದಾರೆ, ಅಲ್ಲಿಗೆ ಮೊಬೈಲ್ ವ್ಯಾನ್ ಕಳುಹಿಸಿಕೊಡಬೇಕೆಂದು ಸಹ ಹೇಳಿದ್ದಾರೆ. ಖಂಡಿತವಾಗಿ ಈ ಕೆಲಸವನ್ನು ಮಾಡುತ್ತೇನೆ.

(ii) ಗಡಿ ವಿಭಾಗದಲ್ಲಿ ಕನ್ನಡ ಕಡ್ಡಾಯವಿದ್ದುದನ್ನು ಹಿಂತೆಗೆದುಕೊಂಡ ವಿರುದ್ಧ ನಡೆಯುತ್ತಿರುವ ಧರಣಿ ಬಗ್ಗೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಮಾನ್ಯ ಅಧ್ಯಕ್ಷರೇ, ಗಡಿ ಭಾಗದಲ್ಲಿ ಕನ್ನಡ ಕಡ್ಡಾಯವಿದ್ದುದನ್ನು ಹಿಂತೆಗೆದುಕೊಳ್ಳುವುದಾಗಿ ಸರ್ಕಾರದವರು ಹೇಳಿರುವ ಬಗ್ಗೆ ಮುಖ್ಯಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಸಂಯುಕ್ತ ಮಹಾರಾಷ್ಟ್ರ ಸೀಮಾ ಸಮಿತಿಯು ಬೆಳಗಾವಿಯಲ್ಲಿ ಮತ್ತು ಮಹಾರಾಷ್ಟ್ರಕ್ಕೆ ಹೊಂದಿದ ಇತರ ಗಡಿ ಭಾಗಗಳಲ್ಲಿ ನಡೆಸಿದ ಚಳುವಳಿಯಿಂದಾಗಿ ಆ ಭಾಗಗಳಲ್ಲಿ ಹಿಂಸಾಕೃತ್ಯಗಳು ನಡೆದವಲ್ಲದೇ ಅನೇಕ ಜನ ನಿರಪರಾಧಿಗಳು ಪ್ರಾಣನೀಗಿದರು, ಮತ್ತು ಸರಕಾರದ ಹಾಗೂ ಸಾರ್ವಜನಿಕ ಆಸ್ತಿಪಾಸ್ತಿಗಳಿಗೆ ಹೆಚ್ಚಿನ ನಷ್ಟವುಂಟಾಯಿತು. ಈ ಹಿನ್ನೆಲೆಯಲ್ಲಿ, ದಿನಾಂಕ ೧೧–೬–೧೯೮೬ರಂದು ಮಹಾರಾಷ್ಟ್ರ ಮತ್ತು ಕರ್ನಾಟಕ ರಾಜ್ಯದ ಮುಖ್ಯ ಮಂತ್ರಿಗಳು ಸಭೆ ಸೇರಿ ಎರಡೂ ಪ್ರದೇಶಗಳಲ್ಲಿನ ಭಾಷಾ ಅಲ್ಪ ಸಂಖ್ಯಾಂತರ ಸಮಸ್ಯೆಗಳನ್ನು ಸಹಾನುಭೂತಿ ಮತ್ತು ಸೌಹಾರ್ದ ಮನೋಭಾವನೆಯಿಂದ ಚರ್ಚಿಸುವುದರ ಮೂಲಕ ಬಗೆಹರಿಸಬೇಕೆಂದು ನಿರ್ಧರಿಸಿದರು ಮತ್ತು ಈ ದಿಶೆಯಲ್ಲಿ ಭಾಷಾ ಅಲ್ಪ ಸಂಖ್ಯಾತರ ತೊಂದರೆಗಳನ್ನು ನಿವಾರಿಸಲು ಉಭಯ ರಾಜ್ಯಗಳ ಹಿರಿಯ ಅಧಿಕಾರಿಗಳ ಜಂಟಿ ಸಮಿತಿಯನ್ನು ರಚಿಸುವುದೆಂದು ನಿರ್ಣಯಿಸಲಾಯಿತು. ಈ ಸಮಿತಿಯು ಈಗಾಗಲೇ ರಚಿತವಾಗಿದ್ದು ಕಾರ್ಯಾರಂಭ ಮಾಡಿದೆ. ಇದೊಂದು ಸ್ಥಾಯೀ ಸಮಿತಿಯಾಗಿದ್ದು, ಪ್ರತಿ ೬ ತಿಂಗಳಿಗೊಮ್ಮೆ ಗಡಿ ಪ್ರದೇಶಗಳಿಗೆ ಭೇಟಿ ನೀಡಿ ಅಲ್ಲಿನ ಜನರ ತೊಂದರೆಗಳನ್ನು ನಿವಾರಿಸಲು ಕ್ರಮಗಳನ್ನು ಸೂಚಿಸುವುದು. ರಾಜ್ಯ ಸರಕಾರಗಳು ಜಂಟಿ ಸಮಿತಿಯ ಸರ್ವಸಮ್ಮತ ಶಿಫಾರಸ್ಸುಗಳನ್ನು ಅನುಷ್ಠಾನಕ್ಕೆ ತರಲು ಯತ್ನಿಸುವುವು.

ದಿನಾಂಕ ೨೯–೯–೧೯೮೬ರಂದು, ಉಭಯ ರಾಜ್ಯಗಳ ಮುಖ್ಯ ಮಂತ್ರಿಗಳು ಮುಂಬಯಿಯಲ್ಲಿ ಭೇಟಿಯಾಗಿ, ಸೌಹಾರ್ದಯುತವಾಗಿ ಮಾತುಕತೆ ನಡೆಸಿದರು. ಆ ಸಮಯದಲ್ಲಿ ಮಹಾರಾಷ್ಟ್ರ ಸರಕಾರವು ಗಡಿ ಪ್ರದೇಶಗಳಲ್ಲಿನ ಕನ್ನಡ ಶಾಲೆಗಳಲ್ಲಿ ಎಂಟನೆಯ ತರಗತಿಯವರೆಗೆ ಮರಾಠೀ ಭಾಷೆ

ಯನ್ನು ಕಡ್ಡಾಯವಾಗಿ ಕಲಿಸುವ ಕ್ರಮವನ್ನು ತೆಗೆದು ಹಾಕಲು ಏಕಪಕ್ಷೀಯವಾಗಿ ನಿರ್ಣಯಿಸಿದ್ದರಿಂದ ಕರ್ನಾಟಕ ಸರಕಾರವೂ ಇದೇ ನೀತಿಯನ್ನು ಅನುಷ್ಠಾನಕ್ಕೆ ತರುವುದೆಂದು ಆ ಸರಕಾರವು ಆಶಯ ವ್ಯಕ್ತ ಪಡಿಸಿತು. ಕರ್ನಾಟಕ – ಮಹಾರಾಷ್ಟ್ರ ಗಡಿ ಪ್ರದೇಶದ ಜನರ ಅನುಕೂಲತೆ ಹಾಗೂ ಅಭಿವೃದ್ಧಿಯ ವಿಚಾರದಲ್ಲಿ ಎರಡೂ ಸರಕಾರ ಒಂದೇ ರೀತಿಯ ಕ್ರಮ ತೆಗೆದುಕೊಳ್ಳುವ ನೀತಿಯನ್ನು ಒಪ್ಪಿರುವುದರಿಂದ ಆ ಆಧಾರದ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದೆಂದು ಮಹಾರಾಷ್ಟ್ರ ಸರಕಾರಕ್ಕೆ ತಿಳಿಸ ಲಾಯಿತು.

ಈ ನೀತಿಗೆ ಅನುಗುಣವಾಗಿ ಯಾವ ತರಹದ ಮಾರ್ಪಾಡು ಮಾಡಬೇಕೆಂದು ಸರಕಾರದ ಪರಿಶೀಲನೆ ಯಲ್ಲಿದೆ. ಸರಕಾರದ ತೀರ್ಮಾನವು ಕನ್ನಡದ ಹಿತಕ್ಕೆ ವಿರುದ್ಧವಾಗಿರುವುದಿಲ್ಲವೆಂದು ನಾನು ಆಶ್ವಾಸನೆ ಕೊಡುತ್ತೇನೆ. ಆದುದರಿಂದ ಬೆಳಗಾವಿಯಲ್ಲಿನ ಕನ್ನಡಿಗರು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ನಡೆಸು ತ್ತಿರುವ ಧರಣಿ ಸತ್ಯಾಗ್ರಹ ಮತ್ತು ಅಮರಣಾಂತ ಉಪವಾಸಗಳನ್ನು ಕೂಡಲೇ ನಿಲ್ಲಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀಮತಿ ಲೀಲಾವತಿ ಆರ್. ಪ್ರಸಾದ್.—ಮಾನ್ಯ ಅಧ್ಯಕ್ಷರೇ, ಅಲ್ಲಿ ಅನ್ಯಾಯವಾಗುತ್ತಿದ್ದರೆ ಉಪವಾಸ ಸತ್ಯಾಗ್ರಹವನ್ನು ಹೇಗೆ ಅವರು ವಾಪಸ್ ತೆಗೆದುಕೊಳ್ಳುತ್ತಾರೆ ತಾವೇ ಹೇಳಿ ? ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಈ ಬಗ್ಗೆ ಈ ಹಿಂದೆಯೇ ಒಂದು ಸಮಾಲೋಚನೆಯನ್ನು ನಡೆಸಿ ಗಡಿ ಪ್ರದೇಶಗಳಲ್ಲಿ ಇರತಕ್ಕಂಥ ಎಲ್ಲಾ ಮರಾಠಿ ಶಾಲೆಗಳಲ್ಲಿ ಕನ್ನಡವನ್ನು ಕಡ್ಡಾಯವಾಗಿ ಕಲಿಸಬೇಕು, ಅದೇ ರೀತಿ ಕನ್ನಡ ಶಾಲೆಗಳಲ್ಲಿ ಮರಾಠಿಯನ್ನು ಕಲಿಯು ವವರು ಕಲಿಯಬಹುದು ಎನ್ನುವ ರೀತಿಯಲ್ಲಿ ಆಗ ಸಮಾಲೋಚನೆ ಮಾಡಿದ್ದರು.

ಈ ವಿಷಯವನ್ನು ಪರಿಶೀಲನೆ ಮಾಡುತ್ತೇವೆ ಅಥವಾ ಆಲೋಚನೆ ಮಾಡುತ್ತೇವೆ ಎಂದರೆ ಅಷ್ಟು ಸೂಕ್ತವಲ್ಲ. ಇದಕ್ಕೆ ಸರಿಯಾದಂಥ ಮಾರ್ಗದರ್ಶನ ಕೊಡಬೇಕಾಗುತ್ತದೆ. ಇವತ್ತಿನ ದಿವಸ ಅಲ್ಲಿನ ಜನಗಳು ಬಹಳ ತೊಂದರೆಗೆ ಒಳಗಾಗಿದ್ದಾರೆ. ನನ್ನ ಮತ ಕ್ಷೇತ್ರದಲ್ಲಿ ಪ್ರತಿಯೊಂದು ಕನ್ನಡ ಶಾಲೆ ಯಲ್ಲೂ ಮರಾಠಿ ಕಲಿಸತಕ್ಕಂಥ ಉಪಾಧ್ಯಾಯರುಗಳನ್ನು ನೇಮಿಸಲಾಗಿದೆ. ನಮ್ಮ ಮಾನ್ಯ ಮುಖ್ಯ ಮಂತ್ರಿಯವರು ಮಹಾರಾಷ್ಟ್ರದ ಮುಖ್ಯ ಮಂತ್ರಿಯವರ ಜೊತೆಯಲ್ಲಿ ಮಾತುಕತೆ ನಡೆಸಿದಾಗ ಮಹಾರಾಷ್ಟ್ರದಲ್ಲೂ ಸಹ ಮರಾಠಿ ಶಾಲೆಗಳಲ್ಲಿ ಕನ್ನಡವನ್ನು ಕಲಿಸತಕ್ಕ ಏರ್ಪಾಡನ್ನು ಮಾಡುತ್ತೇವೆಂದು ಅವರು ಹೇಳಿದ್ದರು. ಮರಾಠಿ ಭಾಷೆಯ ಮಕ್ಕಳು ಕನ್ನಡವನ್ನು ಕಲಿಯುವ ವ್ಯವಸ್ಥೆಯನ್ನು ಅವರು ಮಾಡದೇ ಇದ್ದರೂ. ಮಹಾರಾಷ್ಟ್ರದಲ್ಲಿರುವ ಕನ್ನಡದ ಮಕ್ಕಳು ಕನ್ನಡ ಭಾಷೆಯನ್ನು ಕಲಿಯತಕ್ಕ ವ್ಯವಸ್ಥೆಯನ್ನು ಅವರು ಮಾಡಬೇಕಾಗಿತ್ತು. ಬೆಳಗಾವಿಯಲ್ಲಿ ಕನ್ನಡ ಜನರು ಇದರ ಬಗ್ಗೆ ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ. ಆದ್ದರಿಂದ ತಾವು ಉಪವಾಸ ಕುಳಿತಿರು ವವರಿಗೆ ಒಂದು ಮಾರ್ಗದರ್ಶನ ಕೊಟ್ಟರೆ, ಅವರು ಉಪವಾಸ ಸತ್ಯಾಗ್ರಹದಿಂದ ಏಳುವುದಕ್ಕೆ ಅನುಕೂಲವಾಗುತ್ತದೆ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.—ಮಾನ್ಯ ಅಧ್ಯಕ್ಷರೇ,

ಅಧ್ಯಕ್ಷರು.—ನೀವು ಕೂಡ್ರಿ. ಮಾನ್ಯ ಬಾಬುರೆಡ್ಡಿ ತುಂಗಳ್‌ರವರೇ, ನೀವು ಮಾತನಾಡಿ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್—, ಇದು ಕನ್ನಡದ ಪ್ರಶ್ನೆ

ಅಧ್ಯಕ್ಷರು.—ನೀವು ಕೂಡ್ರಿ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಸನ್ಮಾನ್ಯ ಅಧ್ಯಕ್ಷರೇ, ಸರ್ಕಾರದ ಪರವಾಗಿ ಸನ್ಮಾನ್ಯ ಕಂದಾಯ ಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಆಯಾ ಪ್ರದೇಶಗಳಲ್ಲಿ ಆಯಾ ರಾಜ್ಯ ಭಾಷೆಯನ್ನು ಕಡ್ಡಾಯಗೊಳಿಸುವುದು ಪ್ರಜಾತಂತ್ರದ ಸ್ವಾಭಾವಿಕ ನೀತಿ ಮತ್ತು ಸಂವಿಧಾನದ ಕ್ರಮವಾಗಿರುತ್ತದೆ. ಇಲ್ಲಿ ಒಂದು ವಿಷಯವನ್ನು ಹೇಳಬೇಕಾದರೆ, ನಮ್ಮ ಸರ್ಕಾರವು ಇಂಗ್ಲೀಷ್ ಶಾಲೆಗಳಿಗೆ ಅನುಮತಿ ಯನ್ನು ಬೆಳಗಾವಿ ಪ್ರದೇಶಗಳಲ್ಲಿ ಕೊಡುತ್ತಿದೆ. ಇಂಗ್ಲೀಷ್ ಶಾಲೆಗಳನ್ನು ತೆರೆಯುವುದಕ್ಕೆ ಅನುಮತಿ ಯನ್ನು ಕೊಡಬಾರದೆಂದು ಮತ್ತು ಮರಾಠಿ ಶಾಲೆಗಳಲ್ಲಿ ಕನ್ನಡವನ್ನು ಕಲಿಸತಕ್ಕ ಏರ್ಪಾಡನ್ನು ಮಾಡಬೇಕೆಂದು ಅಲ್ಲಿ ಚಳುವಳಿ ಮಾಡುತ್ತಿದ್ದಾರೆ. ಬೆಂಗಳೂರು ನಗರದಲ್ಲೂ ಸಹ ಇಂಗ್ಲೀಷ್ ಶಾಲೆಗಳನ್ನು ಪ್ರಭಾವಿವ್ಯಕ್ತಿಗಳ ಒತ್ತಾಯಕ್ಕೆ ಮಣಿದು ಸರ್ಕಾರವು ಇಂಗ್ಲೀಷ್ ಶಾಲೆಗಳಿಗೆ ಅನುಮತಿ ಯನ್ನು ಕೊಡುತ್ತಿದೆ. ಕನ್ನಡ ಚಳುವಳಿಗಾರನಾಗಿ ಗಡಿ ಭಾಗದಲ್ಲಿ ಕನ್ನಡ ನಾಡು ನುಡಿಗಾಗಿ ಚಳುವಳಿ

ನಡೆಸಿದಂಥ ನಾನು ಇದನ್ನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ನಮಗೆ ಇಂಗ್ಲೀಷ್ ಭಾಷೆ ಸಂಪರ್ಕ ಭಾಷೆಯಾಗಿರಬೇಕು. ಆದರ ಬಗ್ಗೆ ನನ್ನ ತಕರಾರು ಇಲ್ಲ. ತಮ್ಮ ಗಮನಕ್ಕೆ ಒಂದು ವಿಷಯವನ್ನು ತರುತ್ತೇನೆ. ೮೦ ಕೋಟಿ ಜನಸಂಖ್ಯೆ ಇರುವ ಚೀನಾದೇಶದಲ್ಲಿ ಅವರು ಒಂದು ಇಂಗ್ಲೀಷ್ ಶಬ್ದವನ್ನೂ ಉಪಯೋಗಿಸುವುದಿಲ್ಲ. ನಾನು ಟೋಕಿಯೋಗೆ ಒಂದು ಸಾರಿ ಹೋಗಿದ್ದೆ, ಅಲ್ಲಿ ಒಂದು ಇಂಗ್ಲೀಷ್ ಬೋರ್ಡ್ ಕೂಡ ಇಲ್ಲ. ನಾವು ಕೈ ಸನ್ನೆ, ಬಾಯಿ ಸನ್ನೆಯಿಂದ ಮಾತನಾಡಬೇಕಾಯಿತು. ಈಗ ಏನಾಗಿದೆ ಎಂದರೆ ನಮ್ಮ ಮುಖ್ಯ ಮಂತ್ರಿಯವರ ಜೊತೆ ಕರ್ನಾಟಕದ ಮುಖ್ಯ ಮಂತ್ರಿಯವರು ಮಾತುಕತೆ ಮಾಡಿದ ಮೇಲೆ ಬೆಳಗಾವಿಯಲ್ಲಿರುವ ಮರಾಠಿ ಶಾಲೆಗಳಲ್ಲಿ ಕನ್ನಡವನ್ನು ಕಲಿಯುವ ಬಗ್ಗೆ ಇದ್ದ ಕಡ್ಡಾಯವನ್ನು ತೆಗೆದುಹಾಕಲಾಗಿದೆಯೆಂದು ಅಲ್ಲಿನ ಕೆಲವು ಪತ್ರಿಕೆಗಳವರು ವರದಿ ಮಾಡಿದ್ದಾರೆ ಕರ್ನಾಟಕದ ಗಡಿ ಭಾಗಗಳಲ್ಲಿ ಕನ್ನಡ ಕಡ್ಡಾಯ ಏನು ಇತ್ತು, ಆ ಕಡ್ಡಾಯ ಕನ್ನಡ ಶಿಕ್ಷಣವನ್ನು ತೆಗೆದು ಹಾಕಿರುವ ರೀತಿಯಲ್ಲಿ ಪತ್ರಿಕೆಗಳಲ್ಲಿ ವರದಿಗಳು ಬಂದಿವೆ. ಇದರ ಬಗ್ಗೆ ನಮ್ಮ ಸರ್ಕಾರವಾಗಲೀ, ನಮ್ಮ ಮುಖ್ಯ ಮಂತ್ರಿಯವರಾಗಲೀ ಸರಿಯಾದ ಪ್ರತಿಕ್ರಿಯೆಯನ್ನು ಮಾಡಿಲ್ಲ ಶ್ರೀಮತಿ ಲೀಲಾದೇವಿ ಪ್ರಸಾದ್ ಅವರ ಕ್ಷೇತ್ರದಲ್ಲಿ ಇರುವ ಕನ್ನಡ ಶಾಲೆಗಳಲ್ಲೂ ಮರಾಠಿ ಕಲಿಸತಕ್ಕಂಥ ಏರ್ಪಾಡು ಇದೆ ಎಂದು ಹೇಳಿದ್ದಾರೆ. ಅದೇ ರೀತಿ ನಮ್ಮ ಜಮಖಂಡಿಯಲ್ಲೂ ಸಹ ಎರಡು ಮರಾಠಿ ಶಾಲೆಗಳು ಇವೆ. ಅಲ್ಲಿಯೂ ಸಹ ಮರಾಠಿ ಕಲಿಯುವ ಜನರಿಗೆ ಯಾವುದೇ ರೀತಿಯ ತೊಂದರೆ ಮಾಡುತ್ತಿಲ್ಲ ನಮ್ಮ ಜಮಖಂಡಿಯಲ್ಲಿ ಶಕುಂತಲಾ ಗರ್ಲ್ಸ್ ಹೈಸ್ಕೂಲ್ ಎಂಬ ಮರಾಠಿ ಶಾಲೆಯು ತನ್ನ ಶತಮಾನೋತ್ಸವವನ್ನು ಆಚರಣೆ ಮಾಡಿದೆ. ನಮ್ಮ ಕರ್ನಾಟದಲ್ಲಿ ಮರಾಠಿ ಜನರಿಗೆ ಯಾವ ರೀತಿ ಸೌಲಭ್ಯಗಳನ್ನು ಕೊಟ್ಟಿದ್ದೇವೆಯೋ ಅದೇ ರೀತಿ ಮಹಾರಾಷ್ಟ್ರ ಸರ್ಕಾರವು ಕನ್ನಡ ಶಾಲೆಗಳಿಗೆ ಸೌಲಭ್ಯಗಳನ್ನು ಕೊಟ್ಟಿಲ್ಲ. ಈ ವಿಷಯದ ಬಗ್ಗೆ ಮುಖ್ಯ ಮಂತ್ರಿಯವರು ಸ್ಪಷ್ಟವಾಗಿ ನಮಗೆ ಹೇಳಬೇಕು. ಬೆಳಗಾವಿಯಲ್ಲಿ ಅನೇಕ ಚಳುವಳಿಗಳು ನಡೆಯುತ್ತಿವೆ, ಚಳುವಳಿ ಬಗ್ಗೆ ಎಲ್ಲಾ ಪ್ರಮುಖ ಪತ್ರಿಕೆಗಳಲ್ಲೂ ವರದಿಗಳು ಬಂದಿವೆ. ಸಂಯುಕ್ತ ಕರ್ನಾಟಕ, ಪ್ರಜಾವಾಣಿ ಮುಂತಾದ ಪತ್ರಿಕೆಗಳಲ್ಲೂ ಸಾಕಷ್ಟು ಕಳವಳಕಾರಿಯಾಗಿ ವರದಿಗಳು ಬಂದಿವೆ. ಬೆಳಗಾವಿಯಲ್ಲಿ ಕಳೆದ ನಾಲ್ಕು ದಿನಗಳಿಂದ ಆಮರಣಾಂತ ಉಪವಾಸ ಸತ್ಯಾಗ್ರಹ ನಡೆಯುತ್ತಿದೆ. ಇದರ ಬಗ್ಗೆ ಸರ್ಕಾರದವರು ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು. ಮಹಾರಾಷ್ಟ್ರ ಮತ್ತು ಕರ್ನಾಟಕಗಳಲ್ಲಿ ಭಾಷಾ ಸಾಮರಸ್ಯ ಇರಬೇಕು. ನಮ್ಮ ರಾಜ್ಯದಲ್ಲಿ ಮರಾಠಿ ಜನಗಳಿಗೆ ಸೌಲಭ್ಯ ಕೊಟ್ಟಿರುವ ರೀತಿಯಲ್ಲಿ ಅವರು ಕೊಟ್ಟಿಲ್ಲ. ಇದರಿಂದ ಕರ್ನಾಟಕದ ಜನರಲ್ಲಿ ಒಂದು ಗೊಂದಲ ಮತ್ತು ಅಸಮಾಧಾನ ಉಂಟಾಗಿದೆ ಈಗ ಮಾಡುತ್ತಿರುವ ಚಳುವಳಿಯನ್ನು ಸರ್ಕಾರದವರು ಸಂಕುಚಿತ ದೃಷ್ಟಿಯಿಂದ ನೋಡಬಾರದು. ಮೊದಲು ಶಾಂತವಾಗಿ ಪ್ರಾರಂಭವಾಗಿರುವ ಚಳುವಳಿಯು ನಂತರ ದೊಡ್ಡದಾಗಿ ಸರ್ಕಾರವನ್ನೇ ಆಹುತಿ ತೆಗೆದುಕೊಳ್ಳತಕ್ಕಂಥ ಪರಿಸ್ಥಿತಿ ಬರಬಹುದು. ಆದ್ದರಿಂದ, ಈ ವಿಷಯದ ಬಗ್ಗೆ ಬಹಳ ಸ್ಪಷ್ಟವಾಗಿ ಮುಖ್ಯ ಮಂತ್ರಿಯವರು ಉತ್ತರ ಕೊಡಬೇಕು. ಈಗ ಮಾನ್ಯ ಕಂದಾಯ ಮಂತ್ರಿಯವರು ಸರ್ಕಾರದ ಪರವಾಗಿ ಉತ್ತರ ಕೊಟ್ಟಿದ್ದಾರೆ. ಈ ವಿಷಯ ಸ್ಪಷ್ಟವಾಗಲೇ ಬೇಕು. ಯಾವ ಕಾಲಕ್ಕೂ ಈ ಚಳುವಳಿಯನ್ನು ಹಿಂದಕ್ಕೆ ತೆಗೆದುಕೊಳ್ಳುವುದಿಲ್ಲ. ಸರ್ಕಾರದವರು ಸ್ಪಷ್ಟವಾದ ಹೇಳಿಕೆ ಕೊಡುವವರೆಗೂ ಬೆಳಗಾವಿಯಲ್ಲಿ ಸತ್ಯಾಗ್ರಹ ನಿಲ್ಲುವುದಿಲ್ಲ. ಈ ಚಳುವಳಿಯು ಕರ್ನಾಟಕದ ತುಂಬಾ ಹಬ್ಬುವಂಥ ಸನ್ನಿವೇಶ ಇದೆ.

ಆ ಒಂದು ರೀತಿಯ ಚಳವಳಿಯ ತ್ರೀವ್ರತೆ ವಿಧಾನಸೌಧಕ್ಕೆ ಬಂದು ಅಪ್ಪಳಿಸುವ ಸನ್ನಿವೇಶವೂ ಇದೆ. ಆದಕಾರಣ, ಈ ಬಗ್ಗೆ ಸ್ಪಷ್ಟವಾದ ಒಂದು ಹೇಳಿಕೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ,

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ.—ಅಧ್ಯಕ್ಷರೆ, ಇದು ಕನ್ನಡನಾಡಿನ ಪ್ರಶ್ನೆ...

ಅಧ್ಯಕ್ಷರು.—ಮಾನ್ಯ ಬೆಲ್ಲದ್‌ರವರು ದಯಮಾಡಿ ಕುಳಿತುಕೊಳ್ಳಿ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ.—ಅಧ್ಯಕ್ಷರೆ, ಅವಕಾಶ ಇಲ್ಲ ಅಂದರೆ ಹೇಗೆ? ನಾವು ಇಲ್ಲಿ ಕೇವಲ ಸಹಿ ಮಾಡಿ ಹೋಗಲಿಕ್ಕೆ ಬಂದಿಲ್ಲ. ನಾವು ಮಾಡುತ್ತಿರುವ ವಾದ ಕನ್ನಡ ನಾಡಿನ ಜನತೆಗೆ ಸಂಬಂಧ ಪಟ್ಟದ್ದು...

(ಗೊಂದಲ)

ಶ್ರೀ ಸಿ. ಎಂ. ಮಾಮನಿ.—ಆ ಬಗ್ಗೆ ಒಂದು ಖಚಿತವಾದ ನಿಲುವು ಸರಕಾರದ ಕಡೆಯಿಂದ ಬೇಕು...

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಮಹಾರಾಷ್ಟ್ರದ ಗಡಿಭಾಗಗಳಲ್ಲಿಯೂ ಬಹಳಷ್ಟು ಜನ ಕನ್ನಡಿಗರು ಇದ್ದಾರೆ...

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಈ ಕುರಿತು ಸ್ಪಷ್ಟವಾದ ನಿಲುವು, ಖಚಿತವಾದ ಆದೇಶವನ್ನು ನಾವು ಕೇಳುತ್ತಿದ್ದೇವೆ...

ಅಧ್ಯಕ್ಷರು.—ಹೀಗೆ ತಾವುಗಳು ಎಲ್ಲರೂ ಎದ್ದು ನಿಂತು ಒಮ್ಮೆಗೆ ಮಾತನಾಡಿದರೆ ಯಾರ ಮಾತನ್ನು ಕೇಳಿಕೊಳ್ಳುವುದು? ತಮಗೆ ಅವಕಾಶ ಕೊಡುತ್ತೇನೆ. ಮೊದಲು ತಾವುಗಳು ಕುಳಿತು ಕೊಳ್ಳಬೇಕು. ವಿಶೇಷ ಎಂದು ಪರಿಗಣಿಸಿ ಅವಕಾಶವನ್ನು ಕೊಡುತ್ತೇನೆ.

ಶ್ರೀ ಚಂದ್ರಕಾಂತ ಜಿ. ಬೆಲ್ಲದ್.—ಇದು ಸಮಸ್ತ ಕನ್ನಡಿಗರ ವಿಚಾರ. ಇದಕ್ಕೆ ತಾವುಗಳು ಅವಕಾಶವನ್ನು ಕೊಡಬೇಕು...

ಅಧ್ಯಕ್ಷರು.—ಅವಕಾಶ ಕೊಡುತ್ತೇನೆ. ಈಗ ತಾವುಗಳು ಕುಳಿತುಕೊಳ್ಳಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ನಮ್ಮ ಮಕ್ಕಳು ಮಹಾರಾಷ್ಟ್ರ ಭಾಗದಲ್ಲಿದ್ದರೆ ಮರಾಠಿ ಕಲಿಯಬೇಕು. ಅವರ ಮಕ್ಕಳು ನಮ್ಮಲ್ಲಿದ್ದರೆ ಕನ್ನಡ ಕಲಿಯಬಾರದೇ? ಈ ಬಗ್ಗೆ ನಿರ್ದಿಷ್ಟವಾದಂತಹ ಒಂದು ಉತ್ತರವನ್ನು ದಯಮಾಡಿ ಕೊಡಬೇಕು...

ಅಧ್ಯಕ್ಷರು.—ಮಾನ್ಯ ಚಂದ್ರಶೇಖರ್ ಮಾಮನಿಯವರು ಮಾತನಾಡಿ.

ಶ್ರೀ ಸಿ. ಎಂ. ಮಾಮನಿ.—ನಾನು ಮಾನ್ಯ ಕಂದಾಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ, ಕರ್ನಾಟಕ ಪ್ರದೇಶದಲ್ಲಿ ಮರಾಠಿಗರಿಗೆ ಯಾವ ರೀತಿಯಾಗಿ ರಾಜ್ಯದ ಮುಖ್ಯಮಂತ್ರಿಯವರು ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಯವರು ಮಾತನಾಡಿ ಒಂದು ನಿಲುವನ್ನು ತೆಗೆದುಕೊಂಡಿದ್ದಾರೋ ಅದನ್ನು ಎರಡೂ ರಾಜ್ಯಗಳಲ್ಲಿ ಸಮಾನವಾಗಿ ಜಾರಿಗೆ ತರುವಂತಹ ಒಂದು ಕಾರ್ಯ ಆಗಬೇಕು. ಕೇವಲ ನಾವು ಮಾತ್ರ ಅದನ್ನು ಅನುಸರಿಸಿ ಸೌಲಭ್ಯ ಕಲ್ಪಿಸಿದರೆ ಆಗುವುದಿಲ್ಲ ಅವರೂ ಸಹ ಹಾಗೆ ಮಾಡಬೇಕು. ಇಲ್ಲದಿದ್ದರೆ ಉಗ್ರವಾದ ಹೋರಾಟ ನಡೆಯುವ ಸಂಭವ ಇದೆ. ಆದುದರಿಂದ ಸರಕಾರದ ಪತಿಯಿಂದ ಒಂದು ಖಚಿತವಾದ ನಿಲುವನ್ನು ಹೇಳಬೇಕು.

ಶ್ರೀ ಶಿವಾನಂದ ಹೇಮಪ್ಪ ಕೌಜಲಗಿ.—ಸನ್ಮಾನ್ಯ ಅಧ್ಯಕ್ಷರೇ, ಇವೊತ್ತಿನ ದಿವಸ ನಮ್ಮ ಸನ್ಮಾನ್ಯ ಮುಖ್ಯಮಂತ್ರಿಯವರು ಮಹಾರಾಷ್ಟ್ರದ ಮುಖ್ಯಮಂತ್ರಿಯವರು ಕೂಡಿ ಕನ್ನಡಿಗರಿಗೆ ಒಂದು ರೀತಿಯಲ್ಲಿ ಮಾಡಿದ ಅನ್ಯಾಯವನ್ನು ಕನ್ನಡಿಗರು ಸಹಿಸಲಿಕ್ಕೆ ಆಗುತ್ತಿಲ್ಲ, ಏಕೆಂದರೆ ಇಬ್ಬರೂ ಕೂಡಿ ಮಾಡಿದ ನಿರ್ಣಯದಂತೆ ಮಹಾರಾಷ್ಟ್ರದವರೂ ಕೂಡ ಕನ್ನಡದ ಬಗ್ಗೆ ಬೇಕಾದ ಸವಲತ್ತುಗಳನ್ನು ಕಲ್ಪಿಸಬೇಕಾಗಿತ್ತು. ಅವರು ಹಾಗೆ ಮಾಡಿಲ್ಲ. ನಾವು ಮರಾಠಿಗರಿಗೆ ಕೊಟ್ಟ ಸೌಲಭ್ಯಗಳನ್ನು ಅವರು ಅಲ್ಲಿ ಕನ್ನಡಿಗರಿಗೆ ಕೊಡಬೇಕು, ಇಲ್ಲದಿದ್ದರೆ ಉಗ್ರವಾದ ಚಳುವಳಿಯು ಕರ್ನಾಟಕದಲ್ಲಿ ಆಗುವ ಸಾಧ್ಯತೆ ಬರುತ್ತದೆ ಹಾಗೆ ಆಗುವುದಕ್ಕೆ ಅವಕಾಶ ಆಗದಂತೆ ನೋಡಿಕೊಳ್ಳಬೇಕು. ಆದುದರಿಂದ ಮಾನ್ಯ ಗೃಹಸಚಿವರು ಒಂದು ನಿರ್ದಿಷ್ಟವಾದ ಹೇಳಿಕೆಯನ್ನು ಕೊಟ್ಟು ಕನ್ನಡಿಗರಿಗಾದ ಅನ್ಯಾಯವನ್ನು ಹೋಗಲಾಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಬಿ. ಹಿರೇರೆಡ್ಡಿ.—ನಾನು ತಮ್ಮಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ, ಬೆಳಗಾವಿಯು ಗಡಿಪ್ರದೇಶವಾಗಿದ್ದು, ಅಲ್ಲಿ ಕನ್ನಡವನ್ನು ಕಡ್ಡಾಯವಾಗಿ ಮಾಡಬೇಕು. ಮರಾಠಿಗರು ಅಲ್ಲಿ ಕನ್ನಡವನ್ನು ಕಲಿಯಲೇಬೇಕು. ಮರಾಠಿ ಪ್ರದೇಶದಲ್ಲಿನ ಕನ್ನಡಿಗರಿಗೆ ಅಲ್ಲಿ ಬಹಳ ಅನ್ಯಾಯ ಆಗುತ್ತಿದೆ, ಕನ್ನಡ ಶಾಲೆಗಳು ಇಲ್ಲ ಪಠ್ಯಪುಸ್ತಕಗಳು ಇಲ್ಲ, ಅಧ್ಯಾಪಕರುಗಳು ಇಲ್ಲ ಹೀಗೆ ನಾನಾ ರೀತಿಯಲ್ಲಿ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ, ಆ ಪರಿಸ್ಥಿತಿಯಲ್ಲಿ ಕನ್ನಡ ಪ್ರದೇಶದಲ್ಲಿರುವ ಮರಾಠಿ ಜನರು ಕನ್ನಡವನ್ನು ಕಲಿಯುವ ವಾತಾವರಣವನ್ನು ಉಂಟು ಮಾಡಲೇಬೇಕು. ಇದರಲ್ಲಿ ಒಂದು ಉದಾರ ನೀತಿಯನ್ನು ಅನುಸರಿಸಬಾರದು ಎಂದು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಎಂ. ಇದಿನಬ್ಬ.—ಕನ್ನಡ ಭಾಷೆಯ ಬಳಕೆ ಕರ್ನಾಟಕದಲ್ಲಿ ಆಗಬೇಕೆಂದು, ನಾವೆಲ್ಲರೂ ಕೂಡ ಹೇಳುತ್ತಲೇ ಬಂದಿದ್ದೇವೆ, ಬೆಳಗಾವಿ ಜಿಲ್ಲೆಯಲ್ಲಿ ಮರಾಠಿ ಭಾಗದಲ್ಲಿ ನಮ್ಮ ಕನ್ನಡ ಬಳಕೆಗೆ

ಅಥವಾ ಅದನ್ನು ಕಲಿಸುವಿಕೆಗೆ ಅಡ್ಡಿ ಬರತಕ್ಕಂತಹ ವ್ಯವಸ್ಥೆಯನ್ನು ಮಾಡುತ್ತಿದ್ದಾರೆ, ಇದು ಸರಿಯಾದುದಲ್ಲ ಇದನ್ನು ಹೀಗೆ ಬಿಟ್ಟರೆ ಬೆರಳು ತೋರಿಸಿ ಇಡೀ ಕೈಯನ್ನು ನುಂಗುವ ಹಾಗೆ ಮಾಡುತ್ತಾರೆ, ಗಡೀ ಪ್ರದೇಶದಲ್ಲಿ ಆ ರೀತಿಯ ಒಂದು ವ್ಯವಸ್ಥೆ ಮಾಡುತ್ತಿದ್ದಾರೆ. ಇದರಿಂದಾಗಿ ಅಲ್ಲಿ ಕನ್ನಡದ ಬಳಕೆ ಮತ್ತು ಕಲಿಸುವಿಕೆಗೆ ಯಾವ ರೀತಿಯ ಅಡ್ಡಿಯೂ ಆಗದ ಹಾಗೆ ನೋಡಿಕೊಳ್ಳಬೇಕು, ಮಹಾಜನ ವರದಿ ಆವತ್ತಿನಿಂದ ಇವತ್ತಿನವರೆಗೂ ನೆನೆಗುದಿಗೆ ಬಿದ್ದಿರತಕ್ಕಂಥಾದ್ದು ಇದೆ. ಮಾನ್ಯ ತಂಗಳ್‌ರವರು ಹೇಳಿದ ಹಾಗೆ ಗೋಕಾಕ್ ಚಳುವಳಿ ಅಷ್ಟು ಸಣ್ಣ ರೂಪದಲ್ಲಿ ಪ್ರಾರಂಭವಾಗಿ, ಕಡೆಗೆ ಕನ್ನಡಕ್ಕೆ ಅಗ್ರ ಮಾನ್ಯ ಸ್ಥಾನ ಸಿಗಬೇಕೆಂದು ಒಂದು ದೊಡ್ಡ ಚಳುವಳಿಯೇ ಆಯಿತು ಕನ್ನಡಿಗರು ಎಲ್ಲರೂ ಎದ್ದು ನಿಂತು ಅದಕ್ಕೆ ಸಹಕಾರ ಕೊಟ್ಟರು ಅದೇ ರೀತಿಯಲ್ಲಿ ಇದನ್ನು ಬಿಟ್ಟರೆ, ಎಚ್ಚರಿಕೆ ತೆಗೆದುಕೊಳ್ಳದೆ ಹೋದರೆ ಒಂದು ದೊಡ್ಡ ಅನಾಹುತವಾಗುತ್ತದೆ. ಕರ್ನಾಟಕದ ಗಡೀ ಭಾಗದಲ್ಲಿ ಕನ್ನಡದ ವ್ಯವಸ್ಥೆ ಸರಿಯಾಗಿ ಆಗಬೇಕು ಹಾಗೂ ಕನ್ನಡ ಬಳಕೆಯಾಗಬೇಕು, ಮಾನ್ಯ ಮಂತ್ರಿಗಳು ಇದರ ಬಗ್ಗೆ ಸಮಾಧಾನಕರವಾದ ಉತ್ತರವನ್ನು ಕೊಡಬೇಕು.

ಶ್ರೀ ಹೆಚ್.ಎಲ್. ತಿಮ್ಮೇಗೌಡ.—ಕರ್ನಾಟಕ, ಮಹಾರಾಷ್ಟ್ರ ಗಡಿ ಭಾಗದಲ್ಲಿ ಕನ್ನಡ ಬಳಕೆಗೆ ತೊಂದರೆ ಕೊಡುತ್ತಿರುವಂತಹ ಪದ್ಧತಿಯನ್ನು ಖಂಡನೆ ಮಾಡಿ ಅದಕ್ಕೆ ಪ್ರೋತ್ಸಾಹ ಕೊಡಬಾರದು ಎಂದು ಹೇಳುತ್ತೇನೆ ಅಲ್ಲಿ ಕನ್ನಡ ಶಾಲೆಗಳನ್ನು ಸ್ಥಾಪನೆ ಮಾಡಬೇಕು. ಇನ್ನು ಒಂದು ವಿಚಾರವನ್ನು ನಾನು ತಮ್ಮ ಗಮನಕ್ಕೆ ತರಬಯಸುತ್ತೇನೆ, ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಭೇಟಿ ಮಾಡಿದಾಗ ಮಹಾರಾಷ್ಟ್ರ ಗಡೀ ಭಾಗದಲ್ಲಿ ಮರಾಠಿಯನ್ನು ಕನ್ನಡಿಗರು ಕಡ್ಡಾಯವಾಗಿ ಕಲಿಯಲೇಬೇಕು ಎನ್ನತಕ್ಕಂತಹ ಆರ್ಡರ್ ನಮ್ಮಲ್ಲಿ ಇಲ್ಲ. ಆದರೆ ನಿಮ್ಮ ಭಾಗದಲ್ಲಿ ಮರಾಠಿಗರು ಕನ್ನಡವನ್ನು ಕಡ್ಡಾಯವಾಗಿ ಕಲಿಯಲೇಬೇಕೆಂದು ಆರ್ಡರ್ ಇಟ್ಟಿದ್ದೀರಿ ಅದನ್ನು ತೆಗೆದು ಹಾಕಿ ಎಂದು ಅವರು ಹೇಳಿದರು. ನಮ್ಮ ಮುಖ್ಯಮಂತ್ರಿಗಳು "ಆ ರೀತಿ ಆರ್ಡರ್ ನಿಮ್ಮಲ್ಲಿಲ್ಲದಿದ್ದರೆ, ನಮ್ಮಲ್ಲೂ ಕೂಡ ಅದನ್ನು ವಾಪಸ್ ತೆಗೆದುಕೊಳ್ಳುತ್ತೇವೆಂದು ಹೇಳಿದರು ಇದು ನನಗೆ ಗೊತ್ತಿರುವ ವಿಚಾರ. ಅವರಲ್ಲಿ ಮರಾಠಿಯನ್ನು ಕನ್ನಡಿಗರು ಕಲಿಯಲೇಬೇಕೆಂಬ ಆರ್ಡರ್ ಇಲ್ಲದಿದ್ದರೆ ನಮ್ಮಲ್ಲೂ ಕೂಡ ಮರಾಠಿಗರು ಕನ್ನಡವನ್ನು ಕಡ್ಡಾಯವಾಗಿ ಕಲಿಯಲೇಬೇಕೆಂದು ಇರುವುದು ಸರಿಯಾದುದಲ್ಲ ಇದನ್ನು ಪರಿಶೀಲನೆ ಮಾಡಿ ಒಂದು ವೇಳೆ ಆ ರೀತಿ ಇದ್ದರೆ ಅದನ್ನು ತೆಗೆದುಹಾಕಬೇಕು. ಮಾನ್ಯ ಇದಿನಬ್ಬನವರು ಹೇಳಿದ ಹಾಗೆ ಮಹಾರಾಷ್ಟ್ರದಲ್ಲಿ ಕನ್ನಡವನ್ನು ಕಲಿಯುವುದಕ್ಕೆ ತೊಂದರೆ ಕೊಡುತ್ತಿರುವುದನ್ನು ಖಂಡನೆ ಮಾಡಿ ನಮ್ಮಲ್ಲಿ ಯಾವ ರೀತಿ ಮರಾಠಿ ಪಾಠಶಾಲೆಗಳನ್ನು ತೆಗೆಯುವುದಕ್ಕೆ ಪ್ರೋತ್ಸಾಹ ಕೊಡುತ್ತೇವೆಯೋ ಅದೇ ರೀತಿ ಅವರೂ ಕೂಡ ಕನ್ನಡ ಶಾಲೆಗಳನ್ನು ತೆಗೆಯಬೇಕೆಂದು ಒತ್ತಾಯ ಮಾಡೋಣ. ಮಹಾರಾಷ್ಟ್ರದಲ್ಲಿ ಆ ರೀತಿ ಆರ್ಡರ್ ಇಲ್ಲದಿದ್ದರೆ ನಮ್ಮಲ್ಲೂ ಕೂಡ ಇರುವುದು ಸರಿಯಲ್ಲ. ಎನ್ನುವುದನ್ನ ಯೋಚನೆ ಮಾಡಿ ಪರಿಶೀಲನೆ ಮಾಡಬೇಕು.

ಶ್ರೀ ಚಂದ್ರಕಾಂತ ಜಿ. ಬೆಲ್ಲದ.—ಮಾನ್ಯ ಅಧ್ಯಕ್ಷರೇ, ಕರ್ನಾಟಕದ ಪ್ರದೇಶದಲ್ಲಿ ಮಹಾರಾಷ್ಟ್ರದವರು ಅನೇಕ ಕನ್ನಡ ಪ್ರದೇಶಗಳನ್ನು ಕಬಳಿಸಿಕೊಂಡಿದ್ದಾರೆ. ಈಗಲೂ ಸಹ ಬೆಳಗಾಂ ಅನ್ನು ಮೋಸದಿಂದಲೋ ಅಥವಾ ಅನ್ಯಾಯ ಮಾಡಿಯೋ ತೆಗೆದುಕೊಳ್ಳಬೇಕೆಂಬ ಉದ್ದೇಶ ಅವರಲ್ಲಿ ಇದೆ. ಅನೇಕ ಮೋಸಗಳನ್ನು ಮಾಡುತ್ತಲೇ ಬಂದಿದ್ದಾರೆ. ಕನ್ನಡ ಪ್ರದೇಶದಲ್ಲಿರತಕ್ಕಂತಹ ಪ್ರತಿಯೊಬ್ಬರೂ ಕೂಡ ಕನ್ನಡವನ್ನು ಕಡ್ಡಾಯವಾಗಿ ಕಲಿಯಲೇಬೇಕೆನ್ನುವುದರ ಬಗ್ಗೆ ಹೋರಾಟವಾಗಿ ಅದು ಇಡೀ ನಾಡಿನ ತುಂಬಾ ವ್ಯಾಪಿಸಿತ್ತು. ಬಹುಸಂಖ್ಯಾತ ಕನ್ನಡಿಗರು ಇರುವಂತಹ ಮಹಾರಾಷ್ಟ್ರ ಪ್ರದೇಶದಲ್ಲಿ ನಮ್ಮ ಕನ್ನಡ ಶಾಲೆಗಳನ್ನು ಕಡಿಮೆ ಮಾಡಿದ್ದಾರೆ. ಬೇಕಿದ್ದರೆ ಅಂಕಿಅಂಶಗಳನ್ನು ತರಿಸಿನೋಡಿ ಅಲ್ಲಿ ಕನ್ನಡ ಕಲಿಸಲಿಕ್ಕೆ ಶಿಕ್ಷಕರಿಲ್ಲ ಅಲ್ಲಿರುವಂತಹ ಮಕ್ಕಳ ಕುತ್ತಿಗೆ ಹಿಸುಕುತ್ತಿದ್ದಾರೆ, ಕನ್ನಡವನ್ನು ಕಡಿಮೆ ಮಾಡುತ್ತಿದ್ದಾರೆ. ಇಂತಹ ಸ್ಥಿತಿಯಲ್ಲಿ ಅವರವರ ಭಾಷೆಗಳನ್ನು ಗಡಿ ಪ್ರದೇಶದಲ್ಲಿ ಕಲಿಯಲು ಅವಕಾಶ ಕೊಟ್ಟು, ಎಲ್ಲಿ ಕನ್ನಡಿಗರಿದ್ದಾರೆ. ಅವರಿಗೆ ಅನ್ಯಾಯ ಮಾಡುತ್ತಿರುವಂತಹ ಮಹಾರಾಷ್ಟ್ರಕ್ಕೆ ಸಹಾಯ ಮಾಡುವುದು ಸರಿಯಲ್ಲ. ಇವತ್ತು ಬೆಳಗಾವಿಯಲ್ಲಿ ನಡೆಯುತ್ತಿರತಕ್ಕಂತಹ ಸತ್ಯಾಗ್ರಹ, ಉರುಳು ಸೇವೆ ಏನು ಇದೆ ಅದು ಇಡೀ ನಾಡಿನ ತುಂಬಾ ಹರಡುವಂತಹ ಪರಿಸ್ಥಿತಿಗೆ ಹೋಗಿದೆ. ಇದರ ಬಗ್ಗೆ ತೀವ್ರವಾಗಿ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಪಂಪಾಪತಿ.—ಮಾನ್ಯ ಕಂದಾಯ ಸಚಿವರಲ್ಲಿ ನಾನು ವಿನಂತಿ ಮಾಡಿಕೊಳ್ಳುವುದೇನೆಂದರೆ, ನಾನು ಕರ್ನಾಟಕದ ಮಧ್ಯ ಭಾಗದಿಂದ ಬಂದಿರತಕ್ಕವನು ಆ ಕಡೆಯ ಭಾಗದಿಂದ ಬಂದಿರತಕ್ಕಂತಹ

ಎಲ್ಲಾ ಮಿತ್ರರೂ ಕೂಡ ಇದರ ಬಗ್ಗೆ ಹೇಳಿದ್ದಾರೆ. ಮಹಾರಾಷ್ಟ್ರದವರು ಆಗಿಂದಾಗ್ಗೆ ಇಂತಹ ಚಿತಾವಣಿಗಳನ್ನು ಮಾಡಿದರೆ ಇದು ಸರಿಯಾದಂತಹ ಕ್ರಮ ಆಗುವುದಿಲ್ಲ. ಕನ್ನಡವನ್ನು ಮಹಾರಾಷ್ಟ್ರದಲ್ಲೂ ಕೂಡ ಕಲಿಸಬೇಕು. ಇಲ್ಲಿನ ಮರಾಠಿಗರಿಗೆ ಮರಾಠಿ ಕಲಿಸತಕ್ಕಂತಹ ವ್ಯವಸ್ಥೆ ಇರಬೇಕು. ಎಲ್ಲಾ ಕಡೆ ಗಡಿ ಪ್ರದೇಶದಲ್ಲಿ ಅಂದರೆ ಆಂಧ್ರ, ತಮಿಳುನಾಡು, ಕೇರಳದಲ್ಲಿ ಯಾರು ಕನ್ನಡಿಗರಿದ್ದಾರೆ, ಅವರಿಗೆ ಕನ್ನಡ ಕಲಿಸತಕ್ಕಂತಹ ವ್ಯವಸ್ಥೆ ಇರಬೇಕು. ಮರಾಠಿಗರು ಈ ರೀತಿ ದುಂದಾವರ್ತಿ ಮಾಡಿ ಅಲ್ಲಿರತಕ್ಕಂತಹ ಕನ್ನಡಿಗರಿಗೆ ಕನ್ನಡ ಕಲಿಸತಕ್ಕಂತಹ ವ್ಯವಸ್ಥೆಗೆ ಅಡ್ಡಿಪಡಿಸತಕ್ಕಂಥಾದ್ದು ಅಕ್ಷಮ್ಯ ಅಪರಾಧ ಇದನ್ನು ಕೂಡಲೇ ಮಾನ್ಯ ಸಚಿವರು ಸರಿಪಡಿಸದಿದ್ದರೆ, ಹೊರಗಡೆ ಹೋರಾಟ ಮಾಡುವುದಲ್ಲ ವಿಧಾನ ಸಭೆಯಲ್ಲೇ ಹೋರಾಟ ಮಾಡಬೇಕಾದಂತಹ ಪರಿಸ್ಥಿತಿ ಉದ್ಭವವಾಗುತ್ತದೆ. ಆದಷ್ಟು ಜಾಗ್ರತೆ ತೀವ್ರ ಕಾರ್ಯಕ್ರಮ ಕೈಗೊಳ್ಳಬೇಕೆಂದು ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ವೀರಯ್ಯಸ್ವಾಮಿ.—ಮಾನ್ಯ ಅಧ್ಯಕ್ಷರೇ, ನಮ್ಮ ಸರ್ಕಾರ ಒಂದು ಕಡೆ ಸಮಗ್ರವಾಗಿ ಕನ್ನಡ ಬಳಕೆಯಾಗಬೇಕು ಎಂದು ನಿರ್ಧಾರ ತೆಗೆದುಕೊಂಡು ಆ ಬಗ್ಗೆ ಎಲ್ಲಾ ರೀತಿಯ ಪ್ರಯತ್ನ ಮಾಡುತ್ತಿದೆ. ಇದಕ್ಕಾಗಿ ನಾವು ಒಂದು ಸಮಿತಿಯನ್ನು ಸಹ ರಚಿಸಿದ್ದೇವೆ. ಮತ್ತೊಂದು ಕಡೆ ನಾವು ಶಾಸಕರು ಕನ್ನಡ ಎಲ್ಲಾ ಕಡೆ ಬಳಕೆಯಾಗಬೇಕು ಎಂದು ಪೈಪೋಟಿ ಮಾಡುತ್ತಿದ್ದೇವೆ. ಆದರೆ ಇನ್ನೊಂದು ಕಡೆ ನಮ್ಮ ಮುಖ್ಯಮಂತ್ರಿಯವರು ಈ ಆರ್ಡರನ್ನು ಹಿಂತೆಗೆದುಕೊಳ್ಳತಕ್ಕಂಥ ಕೆಲಸ ಮಾಡುತ್ತಿದ್ದಾರೆ. ಇದು ನಿಜವಾಗಿಯೂ ವಿಪರ್ಯಾಸ. ಇದು ಆಗಕೂಡದು. ಈ ರೀತಿ ಆಗಕೂಡದು ಎಂದು ಇಡೀ ಮನೆಯೇ ಒಂದಾಗಿ ಹೇಳುತ್ತಿದ್ದಾಗ ಈ ಕನ್ನಡವನ್ನು ಕಡ್ಡಾಯ ಮಾಡಬೇಕು, ಮತ್ತೆ ಕಡ್ಡಾಯವಾಗಿ ಕನ್ನಡವನ್ನು ಜಾರಿ ಮಾಡತಕ್ಕಂಥ ಆರ್ಡರನ್ನು ಹೊರಡಿಸಬೇಕೆಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಬಿ. ಮಲ್ಲಪ್ಪ (ಅರಕಲಗೂಡು) —ಮಾನ್ಯ ಅಧ್ಯಕ್ಷರೇ, ಈಗಾಗಲೇ ಸಾಕಷ್ಟು ನಮ್ಮ ಶಾಸಕ ಮಿತ್ರರುಗಳು ಮಹಾರಾಷ್ಟ್ರದಲ್ಲಿರತಕ್ಕಂಥ ಕನ್ನಡ ಶಾಲೆಗಳ ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ಕಿರುಕುಳ ಕೊಡತಕ್ಕಂಥದ್ದು, ವಿದ್ಯಾಭ್ಯಾಸದಲ್ಲಿ ಕನ್ನಡವನ್ನು ಮೊಟಕು ಮಾಡತಕ್ಕಂಥ ವಿಚಾರದ ಬಗ್ಗೆ ಸಾಕಷ್ಟು ಹೇಳಿದ್ದಾರೆ ಒಂದು ಮಾತನ್ನು ಹೇಳುವುದು ಎಂದರೆ ನಮ್ಮ ರಾಜ್ಯದಲ್ಲಿನ ನೆರೆರಾಜ್ಯದವರು ಅವರ ಮಾತೃಭಾಷೆಯಲ್ಲಿಯೇ ಇಲ್ಲಿ ಶಾಲೆಗಳನ್ನು ಪ್ರಾರಂಭಿಸಿರತಕ್ಕಂಥ ವಿದ್ಯಾಸಂಸ್ಥೆಗಳಿಗೆ ಸರ್ಕಾರ ಅನುದಾನವನ್ನು ಕೊಟ್ಟಿರತಕ್ಕಂಥ ನಿದರ್ಶನಗಳು ಇವೆ. ನಮ್ಮ ರಾಜ್ಯದಲ್ಲಿ ಹಿಂದಿ ಶಾಲೆಗಳನ್ನು, ತಮಿಳು ಶಾಲೆಗಳನ್ನು, ತೆಲಗು ಶಾಲೆಗಳನ್ನು ಹಾಗೂ ಮರಾಠಿ ಶಾಲೆಗಳನ್ನು ನಡೆಸುತ್ತಿದ್ದಾರೆ. ಇಂತಹ ಶಾಲೆಗಳವರಿಗೆ ನಮ್ಮ ಸರ್ಕಾರ ಅನುದಾನವನ್ನು ಕೊಟ್ಟಿರತಕ್ಕಂಥ ಸಂದರ್ಭದಲ್ಲಿ ಮಹಾರಾಷ್ಟ್ರದವರು ಈ ರೀತಿಯಾದಂಥ ದ್ರೋಹವನ್ನು ಕನ್ನಡಿಗರಿಗೆ ಮಾಡಿದರೆ ಅವರಿಗೆ ರಾಷ್ಟ್ರೀಯ ಭಾವನೆ ಎಂಬುದನ್ನು ಎತ್ತಿ ತೋರಿಸುತ್ತದೆ. ಅವರಿಗೆ ಮಾನವೀಯತೆ ಇಲ್ಲ ಎನ್ನುವ ಒಂದು ಮಾತನ್ನು ಮಹಾರಾಷ್ಟ್ರ ಸರ್ಕಾರದವರ ಬಗ್ಗೆ ಹೇಳಬೇಕಾಗುತ್ತದೆ. ಎಂಟು–ಹತ್ತು ವರ್ಷಗಳಿಂದ ಅವರ ರಾಜ್ಯದ ಜನತೆ ಇಲ್ಲಿ ಬಂದು ನೆಲೆಸಿದ್ದಾರೆ. ಅವರನ್ನು ನೀವು ಯಾರು ಯಾವ ರಾಜ್ಯದವರು ಎಂದು ಕೇಳದೆ ನಾವು ಅವರಿಗೆ ಎಲ್ಲಾ ಸೌಲಭ್ಯವನ್ನು ಒದಗಿಸಿದ್ದೇವೆ. ಅವರು ನಮ್ಮ ಮುಖ್ಯಮಂತ್ರಿಗಳ ಜೊತೆಯಲ್ಲಿ ಒಪ್ಪಿಕೊಂಡಿರುವುದು ಕೇವಲ ತೋರು ಬೆರಳಿಗೆ ಎಂದೆನಿಸುತ್ತದೆ. ಅವರು ನಂಬಿಕೆಗೆ ಅನರ್ಹರು ಎನ್ನತಕ್ಕಂಥ ವಿಚಾರವನ್ನು ನಮ್ಮ ರಾಜ್ಯದ ಜನ ಅನ್ನುವುದಕ್ಕೆ ಮುಂಚಿತವಾಗಿ ಮಹಾರಾಷ್ಟ್ರ ಸರ್ಕಾರದವರು ರಾಜ್ಯದ ಮತ್ತು ರಾಷ್ಟ್ರದ ಹಿತದೃಷ್ಟಿಯಿಂದ ಈಗಲಾದರೂ ಸೂಕ್ತ ಕ್ರಮ ಕೈಗೊಳ್ಳಬೇಕು. ಈ ರೀತಿಯ ಪರಿಸ್ಥಿತಿ ಉದ್ಭವಿಸಿದಾಗ ರಾಜ್ಯದಲ್ಲಿ ಐಕ್ಯತೆ ಮೂಡಬೇಕು ಎಂದರೆ ಎಲ್ಲಿಂದ ಐಕ್ಯತೆ ಮೂಡುತ್ತದೆ ? ವಿಶಾಲ ಮನಸ್ಸು ಸರ್ಕಾರದಲ್ಲಿ ಬರಬೇಕು. ಆದರೆ ಕೇವಲ ಜನತೆಗೆ ಮೋಸ ಮಾಡತಕ್ಕಂಥ ದೆಸೆಯಲ್ಲಿ ಐಕ್ಯತೆ ಉಳಿಯಬೇಕು ಎಂದು ಹೇಳಿದರೆ ರಾಷ್ಟ್ರದಲ್ಲಿ ಐಕ್ಯತೆ ಉಳಿಯುವುದಕ್ಕೆ ಸಾಧ್ಯವಾಗುವುದಿಲ್ಲ. ಭಿನ್ನವಾಗುತ್ತದೆ. ರಾಷ್ಟ್ರದ ಐಕ್ಯತೆಗೆ ಧಕ್ಕೆ ಬರುತ್ತದೆ ಬೆಳೆಯತಕ್ಕಂಥ ಮಕ್ಕಳಿಗೆ. ವಿದ್ಯಾರ್ಜನೆಗೆ, ಜ್ಞಾನಾರ್ಜನೆಗೆ ಮೊಟಕು ಮಾಡತಕ್ಕಂಥ ಒಂದು ಕೆಟ್ಟ ಪ್ರವೃತ್ತಿಯನ್ನು ಮಹಾರಾಷ್ಟ್ರ ಸರ್ಕಾರ ಮಾಡುವುದು ಬೇಡ. ಕೂಡಲೇ ನಮ್ಮ ಸರ್ಕಾರ ಇದನ್ನು ಪ್ರತಿಭಟಿಸಿ ನಮ್ಮ ರಾಜ್ಯದಲ್ಲಿರತಕ್ಕಂಥವರಿಗೆ ಕೊಟ್ಟಿರುವ ಹಲವಾರು ಸವಲತ್ತುಗಳನ್ನು ಹಿಂತೆಗೆದುಕೊಳ್ಳತಕ್ಕಂಥ ಸಂದರ್ಭ ತರುವುದು ಬೇಡ. ಸರ್ಕಾರ ಇದನ್ನು ತೀವ್ರವಾಗಿ ಪ್ರತಿಭಟಿಸಿ ಇದನ್ನು ಅವರ ಗಮನಕ್ಕೆ ತರಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

೧೧-೩೦ ಎ. ಎಂ.

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).--ಸನ್ಮಾನ್ಯ ಅಧ್ಯಕ್ಷರೇ. ನಾನು ಯಾವ ಭಾಷೆಯಲ್ಲಿ ಮಾತನಾಡಬೇಕು ಅನ್ನುವುದು ಅರ್ಥವಾಗುತ್ತಾ ಇಲ್ಲ. ಯಾಕೆಂದರೆ ನಾನು ಗಡಿ ಪ್ರದೇಶದಿಂದ ಬಂದಿರತಕ್ಕ ಶಾಸಕ. ಇವೊತ್ತಿನ ದಿವಸ ಕರ್ನಾಟಕ ಜನತೆ ಯಾವುದೇ ಭಾಷೆಯ ವಿರೋಧಿಗಳಲ್ಲ. ಆದರೆ ಇವೊತ್ತಿನ ದಿವಸ ಗಡಿ ಪ್ರಾಂತ್ಯದಲ್ಲಿ ಮರಾಠಿಗರಿಗೆ ಕರ್ನಾಟಕ ಸರ್ಕಾರ ಏನೇನು ಅನುಕೂಲಗಳನ್ನು ಕಲ್ಪಿಸಿಕೊಟ್ಟಿದೆಯೋ ಅದೇ ರೀತಿ ಅನುಕೂಲಗಳನ್ನು ಮಹಾರಾಷ್ಟ್ರ ಸರ್ಕಾರ ಕೂಡ ಕನ್ನಡಿಗರಿಗೆ ಕಲ್ಪಿಸಿಕೊಡಬೇಕಾಗಿತ್ತು. ಈ ರೀತಿಯ ಅನುಕೂಲಗಳು ಅಲ್ಲಿ ಕೂಡ ಆಗಬೇಕಾಗಿತ್ತು. ಆದರೆ ನಾನು ಸನ್ಮಾನ್ಯ ಕಂದಾಯ ಮಂತ್ರಿಗಳ ಗಮನಕ್ಕೆ ಒಂದು ವಿಷಯವನ್ನು ಗಮನಕ್ಕೆ ತರುತ್ತಿದ್ದೇನೆ, ಅದೇನೆಂದರೆ ಮಹಾರಾಷ್ಟ್ರದಲ್ಲಿ ಕರ್ನಾಟಕ ಜನರಿಗೆ ಕನ್ನಡ ಓದಲಿಕ್ಕೆ ಹಾಗೂ ಕನ್ನಡ ಭಾಷೆಯನ್ನು ಕಲಿಯಲಿಕ್ಕೆ ಅವಕಾಶವನ್ನು ಅಲ್ಲಿ ಕಲ್ಪಿಸಿಕೊಡುತ್ತಾ ಇಲ್ಲ. ಅವರು ಹೇಳುತ್ತಿದ್ದಾರೆ, ಕನ್ನಡ ಭಾಷೆಯನ್ನು ಕಲಿಸಲು ಅವಕಾಶ ಮಾಡಿಕೊಟ್ಟಿದ್ದೇವೆ ಎಂದು ಆದರೆ ನಮ್ಮ ರಾಜ್ಯದಲ್ಲಿ ಮರಾಠಿಗರಿಗೆ ಅವರ ಭಾಷೆಯನ್ನು ಕಲಿಯಲು ಅವಕಾಶ ಮಾಡಿ ಕೊಟ್ಟ ಹಾಗೆ ಆ ರಾಜ್ಯದಲ್ಲಿ ಮಾಡಿ ಕೊಟ್ಟಿಲ್ಲ. ನನ್ನ ಭಾಗದ ಗಡಿ ಪ್ರದೇಶದಲ್ಲಿ ಕನ್ನಡ ಓದಲಿಕ್ಕೆ, ಬರೆಯಲಿಕ್ಕೆ ಯಾವುದೇ ರೀತಿಯ ಪ್ರೋತ್ಸಾಹ ಇಲ್ಲ. ಕನ್ನಡ ಶಾಲೆಗಳೂ ಇಲ್ಲ. ಮಹಾರಾಷ್ಟ್ರದಲ್ಲಿ ಮರಾಠಿಯನ್ನು ಕಡ್ಡಾಯ ಮಾಡಿದ್ದಾರೆ. ಆದರೂ ಕೂಡಾ ಅಲ್ಲಿ ಕನ್ನಡ ಭಾಷಾ ಜ್ಞಾನಕ್ಕೆ ಕನ್ನಡಿಗರಿಗೆ ಅವಕಾಶ ಕೊಡುತ್ತಾ ಇಲ್ಲ. ಇವೊತ್ತು ಸನ್ಮಾನ್ಯ ಕರ್ನಾಟಕದ ಮುಖ್ಯಮಂತ್ರಿಗಳು ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಜೊತೆಯಲ್ಲಿ ಮಾತನಾಡುವಾಗ ಕರ್ನಾಟಕದಲ್ಲಿ ಕನ್ನಡವನ್ನು ಕಡ್ಡಾಯ ಮಾಡುವುದಿಲ್ಲ ಕೈ ಬಿಟ್ಟಿದ್ದೇವೆ ಎಂಬ ವರದಿ ಪತ್ರಿಕೆಯಲ್ಲಿ ಸಹಾ ಬಂದಿದೆ. ಈ ರೀತಿ ಮುಖ್ಯಮಂತ್ರಿಗಳು ಹೇಳಿಕೆ ಕೊಡತಕ್ಕದ್ದು ಸರಿಯಲ್ಲ. ಈ ವರದಿ ಎಷ್ಟರಮಟ್ಟಿಗೆ ವಿಚಾರಕ್ಕೆ ಯೋಗ್ಯ ಎಂಬುದಾಗಲೀ ಅಥವಾ ಈ ವಿಷಯದಲ್ಲಿ ಎಷ್ಟು ಸತ್ಯಾಸತ್ಯತೆ ಇದೆ ಇದನ್ನು ಪ್ರಸ್ತಾವನೆ ಮಾಡಬೇಕು. ಈ ವಿಷಯದಲ್ಲಿ ಬೆಳಗಾಂನಲ್ಲಿ ಉಪವಾಸ, ಘೋಷಣೆ. ಧರಣಿ ಹಾಗೂ ಸತ್ಯಾಗ್ರಹ ಇತ್ಯಾದಿಗಳನ್ನು ಮಾಡಿದ್ದಾರೆ. ಆ ಜನರ ಪರಿಸ್ಥಿತಿ ತುಂಬಾ ಚಿಂತಾಜನಕ ಆಗಿದೆ ಮರಾಠಿ ಜನರಿಗೆ ಕನ್ನಡತನವನ್ನು ಕೈಬಿಟ್ಟಿದ್ದಾರೆ. ಅದೇ ರೀತಿ ಕನ್ನಡ ಜನತೆಗೆ ಮರಾಠಿ ಭಾಷೆಯಿಂದ ಬಿಡುಗಡೆ ಮಾಡಬೇಕು. ಅವರು ಕರ್ನಾಟಕ ಸರ್ಕಾರದ ಶಾಲೆಗಳಲ್ಲಿ ಕನ್ನಡವನ್ನು ಕಲಿಸತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಹತ್ತು ವರ್ಷಗಳ ನಂತರ ಯಾರಾದರೂ ನೌಕರಿಗಾಗಿ ಇಲ್ಲವೇ ವ್ಯವಸಾಯದಲ್ಲಿ ಇದ್ದವರು ಅಥವಾ ಬೇರೆ ವಿಷಯವಾಗಿ ಕರ್ನಾಟಕಕ್ಕೆ ಬರತಕ್ಕ ಸಂದರ್ಭ ಬಂದರೆ ಅಂಥ ಜನರಿಗೆ ಸರ್ಕಾರ ಇವೊತ್ತಿನ ದಿವಸ ಕನ್ನಡ ಬಳಸಲು ಪ್ರೋತ್ಸಾಹ ಕೊಡಬೇಕು. ಹಿಂದಿನ ಸರ್ಕಾರ ಕೂಡ ಈ ರೀತಿಯ ಪ್ರೋತ್ಸಾಹ ಕೊಡುತ್ತಾ ಇದ್ದರು, ಮುಂದಿನ ಸರ್ಕಾರ ಕೂಡ ಕೊಡಬಹುದು. ನಮ್ಮ ಸರ್ಕಾರ ಕೂಡ ಶಾಲೆಗಳಲ್ಲಿ ಕನ್ನಡ ಮಾತೃಭಾಷೆಯಲ್ಲಿ ಓದುವುದಕ್ಕೆ ಅವಕಾಶ ಮಾಡಿಕೊಡಬೇಕು ಎಂದು ವಿನಂತಿ ಮಾಡಿಕೊಳ್ಳುತ್ತೇನೆ. ನಮ್ಮ ಗಡಿ ಪ್ರದೇಶಗಳನ್ನು ಸೂಕ್ಷ್ಮವಾಗಿ ಪರಿಗಣಿಸಿ ಎರಡೂ ಜನಾಂಗಗಳಿಗೂ ತೊಂದರೆ ಆಗದ ರೀತಿಯಲ್ಲಿ ಈ ವಿಷಯದಲ್ಲಿ ನಿರ್ಧಾರ ತೆಗೆದುಕೊಳ್ಳಬೇಕು. ನಮ್ಮಲ್ಲಿ ಕಳೆದ ವರ್ಷ ಬಸವ ಜಯಂತಿ, ಶಿವ ಜಯಂತಿ ಸಮಯದಲ್ಲಿ ನಡೆದ ಗಲಭೆಗೆ ಹೇಳಿಕೆ ನೀಡಿರುವುದು ಸರಿಯಲ್ಲ. ಈ ಘಟನೆ ಸಂಬಂಧವಾಗಿ ನಾನು ಮುಖ್ಯಮಂತ್ರಿಗಳಿಗೆ ಪತ್ರ ಬರೆದಿದ್ದೇನೆ. ಇದರ ಬಗ್ಗೆ ಸರ್ಕಾರದ ಹೇಳಿಕೆ ಸರಿಯಲ್ಲ ಅಥವಾ ನಮ್ಮ ಪಕ್ಷವನ್ನು ದೂರುವುದೂ ಸರಿಯಲ್ಲ. ಈ ಘಟನೆಯಲ್ಲೂ ಯಾರು ತಪ್ಪಿತಸ್ಥರು ಇದ್ದರೂ ಅವರ ಮೇಲೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು. ಶಿವ ಜಯಂತಿ, ಬಸವ ಜಯಂತಿ ಇತ್ಯಾದಿ ಉತ್ಸವಗಳ ಕಾಲದಲ್ಲಿ ಮೆರವಣಿಗೆಯನ್ನು ೧೨ ಗಂಟೆಯಿಂದ ೧ ಗಂಟೆಯವರೆಗೆ ತರುತ್ತಾ ಇರುವುದು ಸರಿಯಲ್ಲ. ಯಾವುದೇ ಸಮಾಜವಾಗಲಿ, ಮರಾಠಿಗರ ಸಮಾಜವಾಗಲೀ, ಅಥವಾ ಕನ್ನಡಿಗರ ಸಮಾಜವಾಗಲಿ, ಯಾವುದೇ ಒಂದು ವರ್ಗಕ್ಕೆ ಮೆರವಣಿಗೆ ನಡೆಸಲು ರಾತ್ರಿ ೮ರ ನಂತರ ಅವಕಾಶ ಕೊಡಕೂಡದು. ಈ ವಿಷಯದಲ್ಲಿ ಒಂದು ಕಡ್ಡಾಯ ತೀರ್ಮಾನ ಮಾಡಿ, ಘರ್ಷಣೆಗಳನ್ನು ತಪ್ಪಿಸಲು ಅವಕಾಶ ಮಾಡಿಕೊಡಬೇಕೆಂದು ಹೇಳಿ ನನಗೆ ಎರಡು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).— ಸನ್ಮಾನ್ಯ ಸಭಾಧ್ಯಕ್ಷರೇ, ಕರ್ನಾಟಕವು ಸಾರ್ವತ್ರಿಕ ಭಾಷೆ ಸರ್ವ ಧರ್ಮ ಭಾಷೆ ಎಲ್ಲದಕ್ಕೂ ಕೂಡ ಸಮನ್ವಯವನ್ನು ಆಧಾರವಾಗಿ ತೋರಿಸತಕ್ಕಂಥಹ

ರಾಜ್ಯ. ಮಾದರಿಯಾಗಿ ಈ ರೀತಿ ನಾವು ನಡೆದುಕೊಂಡಿದ್ದೇವೆ. ನಮ್ಮ ಈ ವಿಶಾಲ ಮನೋಭಾವನೆ, ಸಹನೆ ಏನು ಇದೆ, ಆ ಸಹನೆಯನ್ನು. ವಿಶಾಲ ಮನೋಭಾವನೆಯನ್ನು ಮರಾಠಿಗರು ದುರುಪಯೋಗ ಪಡಿಸಿಕೊಳ್ಳುತಕ್ಕಂಥ ಅವಕಾಶವನ್ನು ನಾವೀಗ ನೋಡುತ್ತಿದ್ದೇವೆ. ಈ ಕನ್ನಡದ ದೇಗುಲ, ಕನ್ನಡದ ಈ ಸದನದಲ್ಲಿ ಕನ್ನಡದ ವಿರುದ್ಧ ಧಿಕ್ಕಾರ ಹಾಕತಕ್ಕ ಅವರ ನಿರ್ಣಯಗಳನ್ನು ನಾವು ನೋಡಿದ್ದೇವೆ. ಆದರೂ ಕೂಡ ಬಹಳ ತಾಳ್ಮೆಯಿಂದ, ಸಹನೆಯಿಂದ ಅದನ್ನು ನಾವು ಸಹಿಸಿಕೊಂಡಿದ್ದೇವೆ. ಈ ಸಹನೆಯನ್ನು ಮರಾಠಿಗರು ಅರಿತುಕೊಳ್ಳಬೇಕು. ಯಾರಾದರೂ ಮರಾಠಿಗರು ಇರಲಿ, ಅವರಿಗೆ ಯಾವ ಅನುಕೂಲಗಳನ್ನು ಕೊಡಬೇಕೋ ಆ ಎಲ್ಲಾ ಅನುಕೂಲಗಳನ್ನು ಮಾಡಿಕೊಟ್ಟಿದ್ದೇವೆ. ಆದರೆ ಅಲ್ಲಿ ಮಹಾರಾಷ್ಟ್ರದಲ್ಲಿ ಕೂಡ ಯಾರಾದರೂ ಕನ್ನಡಿಗರು ಇದ್ದರೆ ಅಷ್ಟೇ ಸಹಕಾರವನ್ನು, ವಿಶಾಲ ಮನೋಭಾವನೆಯನ್ನು ನಮ್ಮ ರಾಜ್ಯದ ಜನರಿಗೆ ತೋರಿಸುವುದು ರಾಜ್ಯದ ಐಕ್ಯತೆಯ ದೃಷ್ಟಿಯಿಂದ ಒಳ್ಳೆಯದು ಇದು ಮಹಾರಾಷ್ಟ್ರ ಸರ್ಕಾರದ ಆದ್ಯ ಕರ್ತವ್ಯ ಆಗಿದೆ. ಆದರೆ ಇದನ್ನು ಅವರು ಮಾಡುತ್ತಾ ಇಲ್ಲ, ಅವರು ಈ ವಿಷಯವನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ನಾವು ವಿಶಾಲ ಮನೋಭಾವದವರು ಏನು ಮಾಡಿದರೂ ಸುಮ್ಮನೆ ಇರುತ್ತೇವೆ. ಎಂದು ಮರಾಠಿಗರು ತಿಳಿದುಕೊಂಡಿರುವುದು ತಪ್ಪು. ಮಹಾರಾಷ್ಟ್ರದಲ್ಲಿ ಮರಾಠಿಗರು ಇದೇ ರೀತಿ ಮುಂದೆಯೂ ಮಾಡುವುದಾದರೆ ನಾನು ಈ ಸದನದಲ್ಲಿ ಹೇಳುತ್ತೀದ್ದೇನೆ, ಕರ್ನಾಟಕದ ಜನತೆ ಯಾವುದೇ ಪಕ್ಷದಲ್ಲಿರಲಿ, ಕಮ್ಯುನಿಸ್ಟ್ ಪಕ್ಷದವರಿರಲಿ, ಜನತಾ ಪಕ್ಷದಲ್ಲಿರಲಿ, ಅಥವಾ ಬಿ. ಜೆ. ಪಿ. ನಲ್ಲಿರಲಿ, ಎಲ್ಲರೂ ಸೇರಿ ಒಟ್ಟಾಗಿ ಒಂದೇ ಒಂದು ಕೂಗು ಹಾಕಬೇಕಾಗುತ್ತದೆ. ಆ ಕೂಗು, ಕನ್ನಡಿಗರ ಕೂಗು. ಕನ್ನಡಿಗರ ಸಿಂಹನಾದ ಅದು. ನಾವು, ಕನ್ನಡಿಗರೆಲ್ಲರೂ ಮರಾಠಿಗರ ವಿರುದ್ಧ ಏಳುತ್ತೇವೆ, ಕೂಗುತ್ತೇವೆ, ನಮ್ಮ ಜನರಿಗೆ ಅನ್ಯಾಯ ಒದಗಿಸತಕ್ಕಂಥಹ ಅವರ ವಿರುದ್ಧ ಈ ಸದನದಲ್ಲಿ ತೀರ್ಮಾನ ಮಾಡಬೇಕು, ಆದುದರಿಂದ ನಾನು ಮರಾಠಿಗರಿಗೆ ಒಂದು ಎಚ್ಚರಿಕೆಯನ್ನು ಸರ್ಕಾರ ಕೊಡಬೇಕೆಂದು ಹೇಳಿ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಹಿಂಡಸಗೇರಿ ಅಬ್ದುಲ್ ಹಕೀಮ್ ಮಹ್ಮದ್ ಗೌಸ್ (ಹುಬ್ಬಳಿ).—ಮಾನ್ಯ ಅಧ್ಯಕ್ಷರೇ, ಕನ್ನಡ ಭಾಷೆ ಪ್ರಗತಿಯಾಗಬೇಕೆಂಬುದರ ಬಗ್ಗೆ ಎಲ್ಲಾ ಪಕ್ಷದವರು ಪ್ರಯತ್ನ ಮಾಡುತ್ತಿದ್ದಾರೆ. ಆದರೆ ಮಹಾರಾಷ್ಟ್ರದವರು ನಮಗೆ ಸಹಕಾರ ಕೊಡುತ್ತಿಲ್ಲ. ಆದರೆ ನಮ್ಮ ಮಾನ್ಯ ಮುಖ್ಯಮಂತ್ರಿಯವರು ಇಲ್ಲೊಂದು ಹೇಳುವುದು, ಮಹಾರಾಷ್ಟ್ರದಲ್ಲೊಂದು ಹೇಳುವುದು ಸರಿಯಲ್ಲವೆಂದು ಹೇಳುತ್ತೇನೆ, ಬೆಳಗಾವಿ ನಗರಸಭೆಯವರು ಮರಾಠಿಯಲ್ಲಿ ಆಡಳಿತ ವ್ಯವಹಾರ ಮಾಡಬೇಕೆಂದು ನಿರ್ಣಯ ಕೈಗೊಂಡರೆ ಸರ್ಕಾರ ಏನೂ ಕ್ರಮ ತೆಗೆದುಕೊಳ್ಳುತ್ತಿಲ್ಲ. ರಾಮನಗರದಲ್ಲಿ ಕಾಂಗ್ರೆಸ್ ಪಕ್ಷದ ಮುನ್ಸಿಪಲ್ ಅಧ್ಯಕ್ಷರನ್ನು ಅವಮಾನಕ್ಕೊಳಗೊಳಿಸಲಾಯಿತು. ಕನ್ನಡ ಭಾಷೆಯ ವಿಷಯದಲ್ಲಿ ಸೌಮ್ಯವಾದ ಕ್ರಮ ತೆಗೆದುಕೊಳ್ಳಬಾರದೆಂದು ತಮ್ಮ ಮುಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಜಿ. ಜಮಖಂಡಿ (ಮುಧೋಳ್).— ಸನ್ಮಾನ್ಯ ಅಧ್ಯಕ್ಷರೇ, ಇವತ್ತು ಕರ್ನಾಟಕ ರಾಜ್ಯದ ಪರಿಸ್ಥಿತಿ ಅವಹೇಳನಕ್ಕೆ ಗುರಿಯಾಗಿದೆ ಎಂದು ಹೇಳುತ್ತೇನೆ. ಸನ್ಮಾನ್ಯ ಕಂದಾಯ ಮಂತ್ರಿಗಳಲ್ಲಿ ಒಂದು ವಿನಂತಿ ಮಾಡಿದ್ದೇನೆ. ಅವರು ಗಡಿ ಭಾಗದಿಂದ ಬಂದಂಥವರು. ೧೯೫೬ ರಲ್ಲಿ ಪ್ರಾಂತೀಯ ರಾಜ್ಯ ನಿರ್ಮಾಣ ಆದಾಗ ನಮ್ಮ ನಾಲ್ಕು ಜಿಲ್ಲೆಗಳಾದ ಆದರಲ್ಲೂ ಮುಖ್ಯವಾಗಿ ಬಿಜಾಪುರ ಉತ್ತರ ಕನ್ನಡ, ಧಾರವಾಡ, ಬೆಳಗಾವಿ ಪರಿಸ್ಥಿತಿ ಅವರಿಗೆಲ್ಲಾ ಗೊತ್ತಿದೆ. ಬೆಳಗಾವಿ ಮತ್ತು ಇನ್ನಿತರ ಭಾಗಗಳನ್ನು ಮಹಾರಾಷ್ಟ್ರಕ್ಕೆ ನೇರವಾಗಿ ಸೇರಿಸಿಕೊಳ್ಳಬೇಕೆಂಬ ದುರುದ್ದೇಶದಿಂದ ಮರಾಠಿಗರ ಜನಸಂಖ್ಯೆಯನ್ನು ಬೆಳಗಾವಿಯಲ್ಲಿ ಹೆಚ್ಚು ಮಾಡುತ್ತಿದ್ದಾರೆ. ಈ ದುರುದ್ದೇಶವನ್ನು ಹೊಗಲಾಡಿಸುವ ಸಲುವಾಗಿ ಕರ್ನಾಟಕ ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿ ರಚಿಸಿದೆ. ನಾವು ಕನ್ನಡ ಭಾಷೆ ಸಲುವಾಗಿ ಈ ರೀತಿಯಾಗಿ ಹೋರಾಟ ಮಾಡುತ್ತಿದ್ದೇವೆಂದು ಬಹಳ ನೊಂದು ಹೇಳುತ್ತಿದ್ದೇನೆ ಆದರೆ ನಮ್ಮ ದೇಶದ ಬೇರೆ ಯಾವುದೇ ರಾಜ್ಯದಲ್ಲಿ ತಮ್ಮ ಮಾತೃಭಾಷೆ ಉಪಯೋಗಿಸುವ ಸಲುವಾಗಿ ಗಡಿ ಸಲಹಾ ಸಮಿತಿಯಾಗಲೀ ಅಥವಾ ಕಾವಲು ಸಮಿತಿಯಾಗಲಿ ಇಲ್ಲ. ಇಂತಹ ಸಮಿತಿ ಇರುವುದು ಕರ್ನಾಟಕದಲ್ಲಿ ಮಾತ್ರ ಎನ್ನುವ ಮಾತನ್ನು ನಾಚಿಕೆಯಿಂದ ಹೇಳಬೇಕಾಗುತ್ತದೆ. ನಮ್ಮ ಸರ್ಕಾರ ಕರ್ನಾಟಕದಲ್ಲಿ ಕನ್ನಡಮಯ ಮಾಡಬೇಕು ಮತ್ತು ಅಧಿಕಾರಿಗಳು ಆಡಳಿತದಲ್ಲಿ ಕನ್ನಡವನ್ನು ಜಾರಿಗೆ ತರುತ್ತಿದ್ದಾರೆ. ಇವತ್ತು ನಮ್ಮ ಗಡಿಯನ್ನು ಉಳಿಸುವ ಸಲುವಾಗಿ ಹಾಗೂ ಗಡಿ ಭಾಗದಲ್ಲಿರುವ ಹಳ್ಳಿಯ ಮಕ್ಕಳಿಗೆ ಶಿಕ್ಷಣವನ್ನು ನೀಡುವ ಸಲುವಾಗಿ ನಮ್ಮ ಮಾನ್ಯ ಮುಖ್ಯ ಮಂತ್ರಿ

ಯುವರು ಹಾಗೂ ಮಹಾರಾಷ್ಟ್ರದ ಮುಖ್ಯ ಮಂತ್ರಿಯವರು ಏನೋಂದು ಒಪ್ಪಂದ ಮಾಡಿಕೊಂಡಿದ್ದಾರೆ ಅದನ್ನು ಕರ್ನಾಟಕ ಸರ್ಕಾರ ಜಾರಿ ಮಾಡುತ್ತಿದೆ, ಆದರೆ ಈ ಒಪ್ಪಂದವನ್ನು ಮಹಾರಾಷ್ಟ್ರದವರು ಉಲ್ಲಂಘನೆ ಮಾಡುತ್ತಿದ್ದರೆ ನಾವು ಸುಮ್ಮನೆ ಕುಳಿತುಕೊಳ್ಳಬಾರದು. ನಾವೊಂದು ಹೋರಾಟವನ್ನು ಪ್ರಾರಂಭಿಸಬೇಕಾಗುತ್ತದೆಂದು ಹೇಳುತ್ತೇನೆ. ಈ ನಮ್ಮ ಹೋರಾಟದಿಂದ ಬೆಂಕಿ ಆಗಬಹುದು. ಉರಿ ಹತ್ತಬಹುದು. ಇನ್ನಾವುದೇ ಅನಾಹುತ ಉದ್ಭವವಾಗಬಹುದು, ಆದಕಾರಣ, ನಾನು ಮಾನ್ಯ ಕಂದಾಯ ಮಂತ್ರಿಗಳಲ್ಲಿ ಗಮನಕ್ಕೆ ಒಂದು ವಿಚಾರವನ್ನು ತರಬಯಸುತ್ತೇನೆ. ನಾನು ಹೋದ ವಾರ ನಮ್ಮ ಊರಿಗೆ ಹೋದಾಗ ಅಲ್ಲಿನ ಕನ್ನಡ ಶಾಲೆಯ ಗೋಡೆಗೆ ಡಾಂಬರ್ ಹಾಕಿದ್ದರು, ಗಲೀಜು ಮಾಡಿದ್ದರು. ನಮ್ಮ ಕನ್ನಡ ಶಾಲೆ ಪರಿಸ್ಥಿತಿ ಈ ರೀತಿ ಇದೆ. ಕನ್ನಡ ಭಾಷೆಯ ಸಲುವಾಗಿ ಹೋರಾಟ ಮಾಡುತ್ತೇವೆಂದು ಇದ್ದಾಗ ಇಂತಹ ಸ್ಥಿತಿ ಇದೆ. ಈ ಪರಿಸ್ಥಿತಿಯನ್ನು ಹೋಗಲಾಡಿಸುವ ಸಲುವಾಗಿ, ಕಾನೂನನ್ನು ಉಲ್ಲಂಘಿಸುವವರ ವಿರುದ್ಧ ಕಟ್ಟುನಿಟ್ಟಾಗಿ ಶಿಸ್ತಿನ ಕ್ರಮ ತೆಗೆದುಕೊಂಡು ಶಿಕ್ಷೆ ವಿಧಿಸಬೇಕು ಮತ್ತು ಗಡಿ ಪ್ರದೇಶದಲ್ಲಿ ಕನ್ನಡ ಶಾಲೆಗಳನ್ನು ಪ್ರಾರಂಭಿಸಬೇಕೆಂದು ತಮ್ಮ ಮೂಲಕ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

† ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಸನ್ಮಾನ್ಯ ಅಧ್ಯಕ್ಷರೇ, ಮಹಾರಾಷ್ಟ್ರ ಸರ್ಕಾರದವರು ಸೊಲ್ಲಾಪುರ ಮತ್ತು ಇತರ ಭಾಗಗಳಲ್ಲಿ ಕನ್ನಡಿಗರು ಯಾರು ಇದ್ದಾರೆ, ಅವರಿಗೆ ಯಾವ ರೀತಿ ಕರ್ನಾಟಕದಲ್ಲಿ ಬೆಂಬಲ ಕೊಡುತ್ತೇವೆ, ಅದೇ ರೀತಿ ನಮ್ಮ ಕನ್ನಡದ ಮಕ್ಕಳಿಗೂ ನ್ಯಾಯ ಸಿಕ್ಕಬೇಕಾಗಿದೆ, ಅವರಿಗೆ ಸೌಕರ್ಯವನ್ನು ಒದಗಿಸುವುದು ಮಹಾರಾಷ್ಟ್ರ ಸರ್ಕಾರದ ಆದ್ಯಕರ್ತವ್ಯವಾಗಿದೆ. ಈಗ ಅವರು ಮಾಡಿರುವುದು ಅಕ್ಷಮ್ಯ ಅಪರಾಧವಾಗಿದೆ ಮತ್ತು ಅದನ್ನು ನಾವು ಯಾರು ಸಹಿಸುವುದಕ್ಕಾಗುವುದಿಲ್ಲ. ನಾವು ಇಲ್ಲಿ ಮಹಾರಾಷ್ಟ್ರದವರಿಗೆ ಎಷ್ಟು ಅನುಕೂಲವನ್ನು ಕೊಟ್ಟಿದ್ದೇವೆ ಅದೇ ರೀತಿ ಮಹಾರಾಷ್ಟ್ರದವರು ನಮ್ಮ ಮಕ್ಕಳಿಗೆ ಅನುಕೂಲವನ್ನು ಮಾಡಿಕೊಡಬೇಕು. ಇದರ ಬಗ್ಗೆ ನಾವೆಲ್ಲರೂ ಪಕ್ಷಭೇದ ಇಲ್ಲದೆ ಪ್ರತಿಭಟಿಸಬೇಕಾಗಿದೆ. ಅವರು ಏನಾದರೂ ತೊಂದರೆಯನ್ನು ಮಾಡಿದರೆ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳ ಜೊತೆ ಮಾತನಾಡಿ ತಕ್ಷಣ ಈ ಒಂದು ಪರಿಸ್ಥಿತಿಯನ್ನು ಹೋಗಲಾಡಿಸಬೇಕು. ಅಲ್ಲಿಯ ಮಕ್ಕಳಿಗೆ ಇಲ್ಲಿ ಇನ್‌ಸ್ಟಿಟ್ಯೂಷನ್ ಗ್ಯಾರಂಟಿ ಏನು ಇದೆ ಅದು ನಮ್ಮ ಕನ್ನಡದ ಮಕ್ಕಳಿಗೆ ಅಲ್ಲಿ ದೊರೆಯುತ್ತಾ ಇಲ್ಲ. ಮಹಾರಾಷ್ಟ್ರದಲ್ಲಿ ಕನ್ನಡ ಮಕ್ಕಳಿಗೆ ಪ್ರೈಮರಿ ಎಜುಕೇಷನ್‌ನ ಕನ್ನಡದಲ್ಲೇ ಕೊಡಬೇಕೆಂದು ಕಾನ್‌ಸ್ಟಿಟ್ಯೂಷನಲ್ ಪ್ರಾವಿಷನ್‌ನಲ್ಲಿ ಇದೆ. ಆದ್ದರಿಂದ ಇದುವರೆಗೂ ಸಾಕಾದಷ್ಟು ಪ್ರಯೋಜನ ಮತ್ತು ಅನುಕೂಲವನ್ನು ಪಡೆದಿರುವ ಮಹಾರಾಷ್ಟ್ರದವರು ನಮ್ಮ ಕರ್ನಾಟಕದ ಮಕ್ಕಳಿಗೆ ಅನುಕೂಲವನ್ನು ಕಲ್ಪಿಸಿಕೊಡಬೇಕೆಂದು ನಾವು ಒತ್ತಾಯ ಮಾಡುತ್ತೇವೆ. ಹಾಗೆಯೇ ನಮ್ಮ ರಾಜ್ಯ ಸರ್ಕಾರದವರೂ ಈ ಬಗ್ಗೆ ಒಂದು ತುರ್ತು ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಬಿ. ಎಸ್ ಯಡಿಯೂರಪ್ಪ (ಶಿಕಾರಿಪುರ).—ಮಾನ್ಯ ಅಧ್ಯಕ್ಷರೇ, ಇದರ ಬಗ್ಗೆ ಬಹುಶಃ ನಮ್ಮ ರಾಜ್ಯ ಸರ್ಕಾರದವರು ಮಹಾರಾಷ್ಟ್ರ ಸರ್ಕಾರದ ಜೊತೆ ಬಹಳಷ್ಟು ಚರ್ಚೆ ಮಾಡಿದ್ದಾರೆ ನಾವು ಇಲ್ಲಿ ಮರಾಠಿ ಭಾಷೆಗೆ ಏನು ಅನುಕೂಲವನ್ನು ಮಾಡಿಕೊಟ್ಟಿದ್ದೇವೆ ಅದೇ ರೀತಿ ಅವರೂ ಸಹ ಮಹಾರಾಷ್ಟ್ರದಲ್ಲಿ ಕನ್ನಡಕ್ಕೆ ಅನುಕೂಲ ಮಾಡಬೇಕಾದುದು ಅವರ ಆದ್ಯಕರ್ತವ್ಯವೆಂದು ಹೇಳುತ್ತೇನೆ. ಈ ಬಗ್ಗೆ ಮಹಾರಾಷ್ಟ್ರದ ಮುಖ್ಯ ಮಂತ್ರಿಗಳಿಗೆ ನಮ್ಮ ಮುಖ್ಯ ಮಂತ್ರಿಗಳು ಕಟ್ಟುನಿಟ್ಟಾಗಿ ಒಂದು ಮಾತನ್ನು ತಿಳಿಸಿ ಮತ್ತೆ ಈ ರೀತಿಯ ಅವ್ಯವಸ್ಥೆ ಆಗದ ರೀತಿಯಲ್ಲಿ ನೋಡಿಕೊಳ್ಳಬೇಕೆಂದು ಹೇಳುತ್ತೇನೆ.

† ಶ್ರೀ ಕೆ. ಎಸ್. ನಾಗರತ್ನಮ್ಮ (ಗುಂಡ್ಲುಪೇಟೆ).—ಮಾನ್ಯ ಅಧ್ಯಕ್ಷರೇ, ಭಾಷೆ ಬಗ್ಗೆ ಅಭಿಮಾನ ಇರಬೇಕಾದದು ಸಹಜ. ಅದು ಇರಲೇಬೇಕು. ಆದರೆ ಈ ಮರಾಠಿ ಜನಗಳ ದುರಭಿಮಾನ ಇದೆಯಲ್ಲಾ ಇದು ಬಹಳ ಖಂಡನೀಯವಾದುದು. ಅವರ ಮಕ್ಕಳು, ಅವರ ಜನ ಎಲ್ಲಾ ಇಲ್ಲಿ ಅವರ ಭಾಷೆಯನ್ನು ಕಲಿತುಕೊಳ್ಳುತ್ತಾರೆ, ಆದರೆ ನಮ್ಮ ಮಕ್ಕಳು, ನಮ್ಮ ಜನ ಅಲ್ಲಿ ತಮ್ಮ ಭಾಷೆಯನ್ನು ಕಲಿತುಕೊಳ್ಳಬಾರದು, ಇದು ಬಹಳ ದುರಾದೃಷ್ಟಕರವಾದುದು, ಕನ್ನಡದ ಮೇಲೆ ನಮಗೆ ಎಷ್ಟು ಅಭಿಮಾನ

---

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಇದೆ, ಅಷ್ಟೇ ಅಭಿಮಾನ ಮರಾಠಿ ಮೇಲೂ ಅವರಿಗೆ ಇರಬೇಕು, ಆದರೆ ಅದನ್ನು ಬಿಟ್ಟು ಅವರ ದುರಭಿಮಾನ ಏನು ಇದೆ ಅದು ಬಹಳ ಶೋಚನೀಯವಾದುದು. ನಮ್ಮ ಮುಖ್ಯ ಮಂತ್ರಿಗಳು ಇದರ ಬಗ್ಗೆ ಮೇಲೆ ಮೇಲೆ ಮಾತನಾಡುತ್ತಾರೆ. ಅವರಿಗೆ ಅನುಕೂಲಗಳನ್ನು ಮಾಡಿಕೊಡುತ್ತಾರೆ, ಆದ್ದರಿಂದ ಬರೀ ಬಾಯಲ್ಲಿ ಮಾತನಾಡದೆ ಕಾರ್ಯತಃ ಕೈಯಲ್ಲಿ ಮಾಡಿ ತೋರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರ್‌ಮಿಠ್ಕಲ್).—ಅಧ್ಯಕ್ಷರೇ, ಇದರ ಬಗ್ಗೆ ಹೋದ ಸಲ ಕೂಡ ಸದನದಲ್ಲಿ ಪ್ರಸ್ತಾಪಕ್ಕೆ ಬಂದಿತ್ತು. ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಮಹಾರಾಷ್ಟ್ರದ ಮುಖ್ಯ ಮಂತ್ರಿಗಳೂ ಕೂಡ ಒಂದು ಅಗ್ರಿಮೆಂಟ್ ಮಾಡಿಕೊಂಡು ನಮ್ಮ ಗಡಿ ಭಾಗದಲ್ಲಿ ಮರಾಠಿಗರು ಯಾರು ಇದ್ದಾರೆ ಅವರು ತಮ್ಮ ಮಾತೃಭಾಷೆಯನ್ನು ಕಲಿಯುವುದಕ್ಕೆ ಅವಕಾಶ ಮಾಡಿಕೊಡಬೇಕು ಹಾಗೆಯೇ ಕರ್ನಾಟಕದ ಸೊಲ್ಲಾಪುರದಲ್ಲಿ ಕನ್ನಡ ಮಾತನಾಡತಕ್ಕಂತಹ ಆ ಭಾಗದಲ್ಲಿ ಕನ್ನಡವನ್ನು ಕಲಿಯಲಿಕ್ಕೆ ಸೂಕ್ತ ವ್ಯವಸ್ಥೆಯನ್ನು ಮಾಡಬೇಕು ಎಂಬ ಬಗ್ಗೆ ಈಗಾಗಲೇ ಮಾತುಕತೆಯಾಗಿದೆ. ಅವರಿಗೆ ಬೇಕಾದ ಸಹಾಯವನ್ನು ಮಾಡುತ್ತಿದ್ದರೂ ಸಹ ಅವರು ಇವತ್ತಿನ ದಿವಸ ಪುನಃ ಈ ರೀತಿ ವರ್ತಿಸುತ್ತಿದ್ದಾರೆ, ಆದರೂ ಕೂಡ ನಮ್ಮ ಸರ್ಕಾರದವರು ಅವರಿಗೆ ಬೇಕಾದ ಎಲ್ಲಾ ಸೌಲಭ್ಯಗಳನ್ನು ಕೇಳಿದ ಕೂಡಲೇ ಒದಗಿಸುತ್ತಿದ್ದಾರೆ. ಮರಾಠಿ ಎಜುಕೇಷನ್ ಸೊಸೈಟಿಯವರು ಇಂಜಿನಿಯರಿಂಗ್ ಕಾಲೇಜು ಬೇಕೆಂದು ಕೇಳಿದ ಕೂಡಲೇ ನಮ್ಮ ಮುಖ್ಯ ಮಂತ್ರಿಗಳು ಕೊಡುತ್ತೇನೆಂದು ಹೇಳಿದರು. ಹಾಗೆಯೇ ಒಂದು ಲಾ ಕಾಲೇಜಿಗೆ ಗ್ರ್ಯಾಂಟ್ ಕೊಡುತ್ತೇವೆಂದರು. ಈ ಗ್ರ್ಯಾಂಟ್ ಕೊಡಲು ಪ್ರಾವಿಷನ್ ಇಲ್ಲ. ಆದರೂ ಗ್ರ್ಯಾಂಟ್ ಕೊಡುತ್ತೇನೆಂದು ನಮ್ಮ ಮುಖ್ಯ ಮಂತ್ರಿಗಳು ಒಪ್ಪಿಕೊಂಡರು. ಇಷ್ಟೆಲ್ಲಾ ಮಾಡಿದ ನಮ್ಮ ಮುಖ್ಯ ಮಂತ್ರಿಗಳ ಮಾತಿಗೆ ಬೆಲೆ ಇಲ್ಲ. ಹೀಗೆ ಅವರು ಮಾಡಿಕೊಂಡು ಹೋದರೆ ನಾವು ಸುಮ್ಮನಿರುವುದಕ್ಕಾಗುವುದಿಲ್ಲ. ಆದ್ದರಿಂದ ನೀವು ಸ್ಪಷ್ಟವಾದ ನಿಲುವನ್ನು ತಾಳಬೇಕು, ನಮಗೆ ಎಲ್ಲಿಯಾದರೂ ಅನ್ಯಾಯ ಆದರೆ ಕರ್ನಾಟಕದಲ್ಲಿ ಅವರಿಗೆ ಕೊಟ್ಟಿರುವ ಸೌಲಭ್ಯಗಳನ್ನೆಲ್ಲಾ ರದ್ದು ಮಾಡಬೇಕೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಮತ್ತು ಈಗಾಗಲೇ ಗಡಿ ವಿವಾದದ ಬಗ್ಗೆ ಒಂದು ಸುತ್ತಿನ ಮಾತುಕತೆಯೂ ಆಗಿದೆ, ಶ್ರೀ ಬೂಟಾ ಸಿಂಗ್‌ರವರು ಎರಡು ರಾಜ್ಯದ ಮುಖ್ಯ ಮಂತ್ರಿಗಳನ್ನು ಕರೆಸಿ ಗಡಿ ವಿವಾದದ ಬಗ್ಗೆ ಮಾತನಾಡುತ್ತೇನೆಂದು ಹೇಳಿದರು. ಅದು ಹಾಗೇ ಇರಲೀ, ಈ ನಮ್ಮ ಸರ್ಕಾರ ಯಾವ ತೊಂದರೆಯನ್ನು ಎದುರಿಸುತ್ತಿದೆ ಅದನ್ನು ಸರಿಪಡಿಸಲು ಯಾವ ವ್ಯವಸ್ಥೆಯನ್ನು ಮಾಡುತ್ತೀರಿ ಮತ್ತು ಏನು ನಿಲುವನ್ನು ನೀವು ತಾಳುತ್ತೀರಿ ಎಂಬುದನ್ನು ತಿಳಿಸಬೇಕು.

† ಶ್ರೀ ಕೆ. ಹೆಚ್. ಪಾಟೀಲ್ (ಗದಗ್).—ಮಾನ್ಯ ಅಧ್ಯಕ್ಷರೇ, ಈ ವಿಷಯದಲ್ಲಿ ಇಡೀ ಕನ್ನಡ ನಾಡಿನ ಜನತೆಯ ಅಭಿಪ್ರಾಯ ಒಂದೇ ರೀತಿ ಇದೆಯೆಂದು ಹೇಳಿರುವುದರಲ್ಲಿ ಯಾವ ಸಂದೇಹವೂ ಇಲ್ಲ. ಶ್ರೀ ರಾಮಕೃಷ್ಣ ಹೆಗಡೆಯವರು ಮಹಾರಾಷ್ಟ್ರದ ಮುಖ್ಯಮಂತ್ರಿಯವರ ಜೊತೆ ಮಾತನಾಡುವಾಗ ಕನ್ನಡ ನಾಡಿನ ಹಿತಾಸಕ್ತಿಯನ್ನು ಗಮನಿಸಿ ಮತ್ತು ಇಡೀ ರಾಷ್ಟ್ರದ ಚೌಕಟ್ಟಿನಲ್ಲಿ, ಕಾನ್‌ಸ್ಟಿಟ್ಯೂಷನ್ನಿನಲ್ಲಿ ಜನತೆಗೆ ಯಾವ ಹಕ್ಕುಗಳನ್ನು ಕೊಟ್ಟಿದ್ದಾರೋ, ಆ ಹಕ್ಕುಗಳನ್ನು ಪ್ರತಿಪಾದಿಸುವ ದೃಷ್ಟಿಯಿಂದ ಅವರು ರಾಜಿಯ ಮಾತುಗಳನ್ನಾಡಿದ್ದಾರೆ. ಅವರ ಅರ್ಥ ಏನೆಂದರೆ, ಕರ್ನಾಟಕದ ಕನ್ನಡ ಭಾಷೆಯ ಜನ ಮಹಾರಾಷ್ಟ್ರದಲ್ಲಿದ್ದಾರೆ. ಅಲ್ಲಿರತಕ್ಕಂಥ ಕನ್ನಡ ನಾಗರೀಕರಿಗೆ ಮಹಾರಾಷ್ಟ್ರ ಸರ್ಕಾರದವರು ಯಾವ ಸೌಕರ್ಯಗಳನ್ನು ಒದಗಿಸಬೇಕೋ, ಅದನ್ನು ಒದಗಿಸಿಲ್ಲ. ಕರ್ನಾಟಕದಲ್ಲಿರುವ ಮಹಾರಾಷ್ಟ್ರಿಯರಿಗೆ ನಾವು ಯಾವ ಸೌಕರ್ಯಗಳನ್ನು ಒದಗಿಸಲು ಒಪ್ಪಿ ಅದರಂತೆ ಒದಗಿಸುತ್ತಿದ್ದರೂ ಕೂಡ ಅವರು ಮಾತಿಗೆ ತಪ್ಪುತ್ತಿರುವುದು ಸರಿಯಲ್ಲ. ನಮ್ಮ ಮುಖ್ಯಮಂತ್ರಿಗಳ ಮಾತಿನ ಒಂದು ಜಾಲವನ್ನೇ ದುರುಪಯೋಗ ಮಾಡಿಕೊಳ್ಳುತ್ತಿರುವುದು ಅವರ ಕುತ್ಸಿತ ಭಾವನೆಯೆಂದು ಹೇಳುತ್ತೇನೆ. ಡಾಕ್ಟರ್ ತಿಮ್ಮೇಗೌಡರು ಸ್ಪಷ್ಟವಾಗಿ ಅದನ್ನು ಹೇಳಿದ್ದಾರೆ. ಇವತ್ತು ಶ್ರೀಮತಿ ಪ್ರಸಾದರವರಾಗಲಿ, ಅಥವಾ ಮಾನ್ಯ ತುಂಗಾಲ್‌ರವರಾಗಲಿ ಹೇಳಿದ ಭಾಷೆಗೆ ಯಾವುದೇ ರೀತಿಯಲ್ಲಿ ಕಡಿಮೆಯಿಲ್ಲದ ಭಾಷೆಯಲ್ಲಿ ಹೇಳುತ್ತೇನೆ. ಕನ್ನಡ ನಾಡಿನಲ್ಲಿ ಎಲ್ಲಾ ರೀತಿಯ ಜನರೂ ಇರುತ್ತಾರೆ. ದುರ್ದೈವ ಏನೆಂದರೆ ಮಾನ್ಯ ಬೊಮ್ಮಾಯಿಯವರು ಹೇಳಿದ ಒಂದು ಪ್ರಸಂಗ ಈ ಸಭೆಗೆ ಯಾಕೆ ಬಂತೋ ಗೊತ್ತಿಲ್ಲ. ಈಗ ಕನ್ನಡ ಕಾವಲು ಸಮಿತಿಯನ್ನು ನೇಮಿಸಿದ್ದೇವೆ. ಅದು ಇಲ್ಲಿ ಕಾಯುವುದಕ್ಕೆ ಬದಲಾಗಿ ಅಲ್ಲಿ ಹೋಗಿ ಕಾಯಲಿ ಮತ್ತು ರಾಜ್ಯದ ಹಿತವನ್ನು ಕಾಪಾಡಲಿ ಎಂದು ಹೇಳುತ್ತೇನೆ.

ಶ್ರೀ ಯು. ಭೂಪತಿ (ಸಂಡೂರು).—ಮಾನ್ಯ ಅಧ್ಯಕ್ಷರೇ ಗಡಿ ಮತ್ತು ಭಾಷೆ, ಎರಡು ಕೂಡ ಜನರ ಭಾವನೆಗಳನ್ನು ಕೆರಳಿಸತಕ್ಕಂಥ ವಿಚಾರಗಳು. ಈ ಸಮಸ್ಯೆ ಬಹಳ ದಿನಗಳಿಂದ ಉಳಿದುಕೊಂಡು ಬಂದಿದೆ. ಈಗ ಮುಖ್ಯವಾಗಿ ನಮ್ಮ ಮುಂದಿರತಕ್ಕಂಥದ್ದು ಕನ್ನಡವನ್ನು ಕಡ್ಡಾಯಗೊಳಿಸುವುದನ್ನು ಹಿಂತೆಗೆದುಕೊಳ್ಳಬೇಕು ಎನ್ನತಕ್ಕಂಥ ಪ್ರಶ್ನೆ. ಇದಕ್ಕೆ ಕಾರಣ ಏನು ? ನಮ್ಮ ಗಡಿಯ ಸಮಸ್ಯೆ ಎಲ್ಲಿಯವರೆಗೆ ಬಗೆಹರಿಯುವುದಿಲ್ಲವೋ, ಅಲ್ಲಿಯವರೆಗೆ ಈ ಭಾಷೆ ಸಮಸ್ಯೆ ಕೂಡ ಇರುತ್ತದೆ. ಈ ಗಡಿ ಸಮಸ್ಯೆಯನ್ನು ಬಗೆಹರಿಸುವುದಕ್ಕಾಗಿ ಮಹಾಜನ್ ವರದಿ ನಮ್ಮ ಮುಂದೆ ಇದೆ. ಅದರ ಅನುಷ್ಠಾನದ ಬಗ್ಗೆ ಎರಡೂ ರಾಜ್ಯಗಳ ಮುಖ್ಯಮಂತ್ರಿಗಳು ಒಪ್ಪಿಕೊಂಡು, ಅದನ್ನು ಜಾರಿಗೆ ತಂದರೆ ನಮ್ಮದೇನೂ ಅಭ್ಯಂತರ ಇಲ್ಲವೆಂದು ಹೇಳಿ ಕೇಂದ್ರ ಸರ್ಕಾರ ಜಾರಿಕೊಂಡರೆ ಆಗುವುದಿಲ್ಲ ಮಹಾಜನ್ ವರದಿಯನ್ನು ಅನುಷ್ಠಾನಕ್ಕೆ ತಂದು, ಈ ಗಡಿ ಸಮಸ್ಯೆಯನ್ನು ಬಗೆಹರಿಸಿಕೊಳ್ಳತಕ್ಕಂಥ ಆದೇಶಗಳನ್ನು ಎರಡೂ ರಾಜ್ಯಗಳಿಗೂ ಕೇಂದ್ರ ಸರ್ಕಾರ, ಕೊಡಬೇಕು. ಈ ಜವಾಬ್ದಾರಿ ಕೊನೆಗೆ ಕೇಂದ್ರ ಸರ್ಕಾರದ ಮೇಲೆ ಬೀಳುತ್ತದೆ. ಇದು ಬರೀ ಒಂದು ರಾಜ್ಯದ ಪ್ರಶ್ನೆಯಲ್ಲ. ಮಹಾರಾಷ್ಟ್ರ ಒಂದು ದೇಶವಲ್ಲ. ಕರ್ನಾಟಕ ಒಂದು ದೇಶವಲ್ಲ. ಇವು ಒಂದೇ ದೇಶದ ಎರಡೂ ರಾಜ್ಯಗಳು. ಹೀಗಿರುವಾಗ ಕೇಂದ್ರಸರ್ಕಾರದ ಮೇಲೆ ಹೆಚ್ಚಿನ ಹೊಣೆಯಿದೆ. ನಮ್ಮ ರಾಜ್ಯದಲ್ಲಿ ಮುಖ್ಯಮಂತ್ರಿಗಳು ಹಿಂದೆ ತೆಲುಗು ಗಂಗಾ ವಿಚಾರ ಬಂದಾಗ ಕೂಡ ಹೀಗೆ ನಡೆದುಕೊಂಡಿದ್ದಾರೆ. ಅದೇನೆಂದರೆ, ಅವರು ರಾಷ್ಟ್ರನಾಯಕರಾಗಬೇಕೆನ್ನುವ ಭಾವನೆಯನ್ನು ತಡೆಯಲ್ಲಿಟ್ಟುಕೊಂಡು ರಾಜ್ಯದ ಹಿತಾಸಕ್ತಿಯನ್ನು ಬಲಿಕೊಡುತ್ತಿದ್ದಾರೆ. ಇದಕ್ಕೆ ಒಂದು ಸ್ಪಷ್ಟವಾದ ವಿವರಣೆಯನ್ನು ಕೊಡಬೇಕು. ಅಲ್ಲಿ ಈಗ ಚಳುವಳಿ ನಡೆಯುತ್ತಿದೆ. ಅಲ್ಲಿನ ಚಳುವಳಿಯನ್ನು ನಿಲ್ಲಿಸುವ ರೀತಿಯಲ್ಲಿ ಮತ್ತು ಅಲ್ಲಿನ ಜನತೆಗೆ ಅವರ ಭಾವನೆಗಳಿಗೆ ಧಕ್ಕೆಯುಂಟಾಗಿರತಕ್ಕ ಪರಿಸ್ಥಿತಿ ಏನು ಒದಗಿದೆಯೋ ಅದಕ್ಕಾಗಿ ಅವರ ಮನಸ್ಸಿಗೆ ನೆಮ್ಮದಿಯಾಗತಕ್ಕಂಥ ರೀತಿಯಲ್ಲಿ ಕ್ರಮ ಕೈಗೊಳ್ಳುವ ಬಗ್ಗೆ ಸರ್ಕಾರ ಉತ್ತರ ನೀಡಬೇಕೆಂದು ಕೋರುತ್ತೇನೆ.

ಶ್ರೀ ಎನ್. ಜ್ಞಾನದೇವ ದೊಡ್ಡಮೇಟಿ (ರೋಣ).—ಮಾನ್ಯ ಅಧ್ಯಕ್ಷರೇ, ಗಡಿ ಪ್ರದೇಶಗಳಲ್ಲಿರುವ ಶಾಲೆಗಳಲ್ಲಿ ೮ನೇ ತರಗತಿಯವರೆಗೆ ಮರಾಠಿ ಭಾಷೆಯನ್ನು ಕಡ್ಡಾಯವಾಗಿ ಕಲಿಯಲು ಅವಕಾಶ ಮಾಡಿಕೊಟ್ಟಿದ್ದಾರೆ. ಇದರ ಬಗ್ಗೆ ಏಕಪಕ್ಷೀಯವಾಗಿ ನಿರ್ಣಯಕೈಗೊಂಡಿದೆ. ಆದರೆ ಅವರು ಅದಕ್ಕೆ ಅವಕಾಶ ಕೊಡದೆ, ಅಲ್ಲಿನ ಮರಾಠಿ ಭಾಷೆಯನ್ನು ಕಲಿಯುವುದು ಅನಿವಾರ್ಯ ಎನ್ನತಕ್ಕಂಥ ಪರಿಸ್ಥಿತಿಯನ್ನುಂಟು ಮಾಡಿದ್ದಾರೆ. ಮಾನ್ಯ ಮುಖ್ಯಮಂತ್ರಿಯವರು ಮಾತನಾಡುವಾಗ ಸೌಹಾರ್ದಯುತವಾದ ವಾತಾವರಣ ಇದ್ದಿರಬಹುದು. ಆದರೆ ಈ ಸೌಹಾರ್ದಯುತವಾದ ವಾತಾವರಣ ಇಂದು ಜಗಳಕ್ಕೆ ಹತ್ತಿದೆ ಅವರು ಬರೀ ಮಾತಿನಲ್ಲಿ ಸೌಹಾರ್ದತೆಯನ್ನು ವ್ಯಕ್ತಪಡಿಸಿದರೆ ಸಾಲದು ಕೃತಿಯಲ್ಲಿಯೂ ನಮ್ಮ ಜನರೊಂದಿಗೆ ಬೆರತು ಸೌಹಾರ್ದತೆಯನ್ನು ವ್ಯಕ್ತಮಾಡಬೇಕು. ಆದರೆ ಅವರು ಈ ರೀತಿ ಮಾಡದೆ ಮಹಾರಾಷ್ಟ್ರೀಯರು ಗಡಿ ಭಾಗದಲ್ಲಿರುವ ನಮ್ಮ ಜನರಿಗೆ ಕೊಡುತ್ತಿರುವ ತೊಂದರೆಯನ್ನು ನಾವೆಲ್ಲರೂ ಖಂಡಿಸಬೇಕಾಗಿದೆ.

ಶ್ರೀ ಕೆ. ಎಂ. ಮುನಿಯಪ್ಪ (ಚಿಕ್ಕಬಳ್ಳಾಪುರ).—ಮಾನ್ಯ ಅಧ್ಯಕ್ಷರೇ, ಈ ಕನ್ನಡ ಭಾಷೆ ಏನು ಇದೆ ಇದು ನಮಗೆಲ್ಲಾ ತಾಯಿ ಇದ್ದ ಹಾಗೆ. ಈ ಬಗ್ಗೆ ದಿವಂಗತ ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈ ಅವರು ರಚನೆ ಮಾಡಿದ ಒಂದು ಕವನವನ್ನು ತಮ್ಮ ಮುಂದೆ ಓದುತ್ತೇನೆ. ಅದು ಈ ರೀತಿ ಇದೆ.—

"ತಾಯಿ ಬಾರ ಮೊಗವ ತೋರಾ
ಕನ್ನಡಿಗರ ಮಾತೆಯೆ,
ಹರಸು ತಾಯೆ, ಸುತರ ತಾಯೆ,
ನಮ್ಮ ಜನ್ಮದಾತೆಯೆ"

ಇಂತಹ ಒಂದು ಕನ್ನಡ ಭಾಷೆಯನ್ನು ಅಭಿವೃದ್ಧಿಪಡಿಸಬೇಕಾದ ಬಗ್ಗೆ ಹಾಗೂ ಗಡಿ ಪ್ರದೇಶದಲ್ಲಿ ಅನುಸರಿಸುತ್ತಾ ಇರತಕ್ಕಂಥ ಈ ಮಹಾರಾಷ್ಟ್ರದವರ ವರ್ತನೆ ಏನು ಇದೆ ಅದನ್ನು ನಾವು ತೀವ್ರವಾಗಿ ಖಂಡಿಸಬೇಕಾಗಿದೆ. ಈ ಮಹಾರಾಷ್ಟ್ರದವರ ಬಗ್ಗೆ ಒಂದು ಔದಾರ್ಯವನ್ನು ನಮ್ಮ ಸರ್ಕಾರ ಅಂದರೆ ಮುಖ್ಯಮಂತ್ರಿಗಳು ತೋರಿಸುತ್ತಾ ಇರುವುದನ್ನು ಈ ಮಹಾರಾಷ್ಟ್ರದವರು ದುರುಪಯೋಗ

ಪಡಿಸಿಕೊಳ್ಳುತ್ತಿದ್ದಾರೆ. ಆದುದರಿಂದ ಇದರ ಬಗ್ಗೆ ದೊಡ್ಡ ಕಾರ್ಯಕ್ರಮವನ್ನು ಕೈಗೊಳ್ಳ ಬೇಕೆಂದು ಹೇಳುತ್ತೇನೆ. ಇದೇರೀತಿ ಮುಂದುವರೆಯುವುದಾದರೆ, ಇಡೀ ಕನ್ನಡಿಗರೆಲ್ಲಾ ಸೇರಿ ಗೋಕಾಕ್ ಚಳುವಳಿಯನ್ನು ಯಾವರೀತಿಯಾಗಿ ಮಾಡಿದರೋ ಅದೇ ರೀತಿಯಾಗಿ ಈ ಚಳುವಳಿಯನ್ನೂ ಸಹ ಪ್ರಾರಂಭಿಸಬೇಕಾಗಿದೆ. ಆದುದರಿಂದ ಸರ್ಕಾರದವರು ಈ ಬಗ್ಗೆ ನಿರ್ದಿಷ್ಟವಾದ ಕಾರ್ಯಕ್ರಮ ಕೈಗೊಳ್ಳಬೇಕೆಂದು ಹೇಳುತ್ತೇನೆ.

ಶ್ರೀ ಕುಮಾರಗೌಡ ಎ. ಪಾಟೀಲ್ (ಬಸವನ ಬಾಗೇವಾಡಿ).—ಮಾನ್ಯ ಅಧ್ಯಕ್ಷರೇ ನಮ್ಮ ದೇಶದಲ್ಲಿ ಬಹಳಷ್ಟು ಭಾಷೆಗಳು ಇದ್ದಾವೆ ಸಂವಿಧಾನದ ಪ್ರಕಾರ ಅವರವರ ಭಾಷೆಗಳಲ್ಲಿ ಮಾತನಾಡು ವುದಕ್ಕೆ ಮತ್ತು ಭಾರತದಲ್ಲಿ ಎಲ್ಲಾಕಡೆ ಸಂಚಾರ ಮಾಡುವುದಕ್ಕೆ ಅವಕಾಶ ಇದೆ. ಈಗ ಮಹಾರಾಷ್ಟ್ರ ದವರು ಈ ಬಗ್ಗೆ ಒಂದು ಸಮಸ್ಯೆಯನ್ನು ತಂದೊಡ್ಡಿದ್ದಾರೆ. ಕರ್ನಾಟಕ ರಾಜ್ಯ ಉದಯವಾಗಿ ೩೦ ವರ್ಷವಾದರೂ ಕೂಡ ಈ ಸಮಸ್ಯೆ ಹಾಗೆಯೇ ಉಳಿದಿದೆ. ನಮ್ಮ ಕರ್ನಾಟಕ ತೆಗೆದುಕೊಂಡರೆ ಇಲ್ಲಿ ೫ ಭಾಷೆಗಳಿಂದ ಕೂಡಿದ, ಅಥವಾ ಸಂತೃಪ್ತವರಿದ ರಾಜ್ಯವಾಗಿದೆ. ಇದೇ ನಮ್ಮ ಪಕ್ಕದ ರಾಜ್ಯವಾದ ಆಂಧ್ರ, ಮಹಾರಾಷ್ಟ್ರ, ತಮಿಳುನಾಡು, ಕೇರಳ ಹಾಗೂ ಗೋವಾ ತೆಗೆದುಕೊಂಡರೆ ಅಲ್ಲಿ ಇಂಥಾ ಯಾವುದು ಒಂದು ಸಮಸ್ಯೆಯೂ ಇಲ್ಲ. ನಾನು ಮೊದಲೇ ಹೇಳಿದ ಹಾಗೆ ಕರ್ನಾಟಕ ಉದಯವಾಗಿ ೩೦ ವರ್ಷವಾದರೂ ಕೂಡ ಒಂದಲ್ಲ ಒಂದು ರೀತಿಯಲ್ಲಿ ಪದೇ ಪದೇ ಈ ಸಮಸ್ಯೆಗಳು ಬರುತ್ತಾ ಇವೆ. ಈಗ ಅವರು ಬೆಳಗಾಂ ಬಗ್ಗೆ ಅಲ್ಲಿ ಹಿಂಸಾಚಾರವನ್ನು ಮಾಡುತ್ತಿದ್ದಾರೆ. ಇಲ್ಲಿ ನಮ್ಮ ಕನ್ನಡಿಗರ ಒಂದು ದೌರ್ಬಲ್ಯವನ್ನು ತಿಳಿದುಕೊಂಡು ಮಾಡುತ್ತಾರೆಯೋ ಏನೋ ಎಂದು ನನ್ನಗನ್ನಿಸುತ್ತದೆ. ಭಾರತದಲ್ಲಿರತಕ್ಕಂಥಾವರೆಲ್ಲಾ ಒಂದೇ ಎನ್ನುವ ಭಾವನೆ ಬರಬೇಕು. ಇಲ್ಲದೇ ಹೋದರೆ, ಈ ರೀತಿಯಾಗಿ ಅವರು ಚಳುವಳಿಯನ್ನು ಮಾಡುತ್ತಾ ಹೋದರೆ ದೇಶದ ಹಿತದೃಷ್ಟಿಯಿಂದ ಅದು ಒಳ್ಳೆಯದಲ್ಲವೆಂದು ನಾನು ಹೇಳುತ್ತೇನೆ. ಆದುದರಿಂದ ಸರ್ಕಾರದವರು ಇದರ ಬಗ್ಗೆ ಒಂದು ಧೈರ್ಯವಾದ ನಿಲುವನ್ನು ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ ಅಲ್ಲದೇ ಈಗಾಗಲೇ ನಾವು ಎಷ್ಟೋ ಕನ್ನಡ ಪ್ರದೇಶಗಳನ್ನು ಕಳೆದುಕೊಂಡಿದ್ದೇವೆ. ತಮಗೆ ಹೇಳಬೇಕಾದರೆ, ಶೊಲ್ಲಾಪುರ, ಅಕ್ಕಲಕೋಟೆ ಮತ್ತು ಜತ್ ಪ್ರದೇಶ ಗಳನ್ನು ಕಳೆದುಕೊಂಡಿದ್ದೇವೆ. ಆದರೂ ಈ ಸಮಸ್ಯೆ ಬಗೆಹರಿದಿಲ್ಲ. ಮತ್ತೆ ಬೆಳಗಾಂಅನ್ನು ಕಬಳಿಸುವುದಕ್ಕೆ ಅವರು ಪ್ರಯತ್ನ ಮಾಡುತ್ತಿದ್ದಾರೆ. ಏನೇ ಆದರೂ ನಮ್ಮ ಕನ್ನಡಿಗರು ಇದಕ್ಕೆ ಅವಕಾಶ ಕೊಡುವುದಿಲ್ಲ ಎಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಸರ್ಕಾರವೂ ಕೂಡ ಈ ವಿಚಾರದಲ್ಲಿ ಒಂದು ದಿಟ್ಟ ನಿಲುವನ್ನು ತೆಗೆದುಕೊಳ್ಳಬೇಕು ಎಂದು ಮತ್ತೊಮ್ಮೆ ಹೇಳುತ್ತೇನೆ.

ಶ್ರೀ ಸಿ. ಪಿ. ಮೂಡ್ಲಗಿರಿಯಪ್ಪ (ಸಿರಾ).—ಮಾನ್ಯ ಅಧ್ಯಕ್ಷರೇ, ಇದು ಒಂದು ಬಹಳ ಸೂಕ್ಷ್ಮ ವಾದಂಥ ವಿಚಾರ, ನಾವೆಲ್ಲರೂ ಕೂಡ ಈವೊತ್ತು ಒಂದೇ ಸಂವಿಧಾನದ ಅಡಿಯಲ್ಲಿ ಒಂದು ವ್ಯವಸ್ಥಿತವಾದ ರಾಜಕೀಯ ವ್ಯವಸ್ಥೆಯನ್ನು ಸರಿಯಾಗಿ ನೋಡುತ್ತಾ ಇಲ್ಲ. ನಾವೆಲ್ಲರೂ ಭಾರತೀಯರು ಎನ್ನುವ ಮನೋಭಾವನೆ ಬರಬೇಕು. ಎಲ್ಲಿಯವರೆಗೆ ಈ ಔದಾರ್ಯ ಮನೋಭಾವನೆ ಬರುವುದಿಲ್ಲವೋ, ಅಲ್ಲಿಯವರೆಗೂ ಈ ಸಮಸ್ಯೆ ಹಿಗೆಯೇ ಇರುತ್ತದೆ. ನಮ್ಮ ಔದಾರ್ಯವನ್ನು ಅವರು ದುರುಪಯೋಗ ಮಾಡಿಕೊಳ್ಳುತ್ತಿದ್ದಾರೆಂದು ನನ್ನ ಭಾವನೆ. ಈ ಬಗ್ಗೆ ಕರ್ನಾಟಕದ ಪತ್ರಿಕೆಗಳಲ್ಲಿ ಬಂದಿರುವ ಸುದ್ದಿ ನೋಡಿ ಎಲ್ಲರ ಮನಸ್ಸನ್ನೂ ಕೆದಿಸಿದೆ. ಅದರಲ್ಲೂ ಕೂಡ ಎಲ್ಲಾ ಭಾಷೆಗಳ ಬಗ್ಗೆ, ಎಲ್ಲಾ ಮತಗಳ ಬಗ್ಗೆ ಎಲ್ಲಾ ಧರ್ಮಗಳ ಬಗ್ಗೆ ಒಂದು ವಿಶಾಲ ಮನೋಭಾವನೆಯನ್ನು ಇಟ್ಟುಕೊಂಡಿರ ತಕ್ಕಂಥಾ ನಮ್ಮ ಕನ್ನಡ ದೇಶದ ಜನರ ಮನಸ್ಸಿನಲ್ಲಿ ಇದರಿಂದ ಒಂದುರೀತಿ ಹುಳಿ ಹಿಂಡಿದಂತಾಗುತ್ತದೆ. ಇದು ಖಂಡನೀಯವಾದ ವಿಚಾರ. ಆದುದರಿಂದ ಈ ಸಂದರ್ಭದಲ್ಲಿಈ ಸದನದ ಮುಖಾಂತರ ಹೇಳುವುದೇ ನೆಂದರೆ, ಇಲ್ಲಿ ಬೇರೆ ಬೇರೆ ಭಾಷೆ ಮಾತನಾಡುತ್ತಾ ಇರುವವರನ್ನೆಲ್ಲಾ ಸೇರಿಸಿ ಒಂದು ಡಿಲಿಗೇಷನ್ ಅನ್ನು ಮಾಡಿ. ಇಲ್ಲಿ ಅವರುಗಳೆಲ್ಲಾ ಎಷ್ಟು ಸುಖವಾಗಿದ್ದಾರೆ ಅನ್ನುವುದನ್ನು ತಿಳಿದುಕೊಳ್ಳಲಿ. ಇದು ಯಶಸ್ವಿಯಾಗಬೇಕಾದರೆ, ಲಿಜಿಸ್ಲೇಟರ್ಸ್ ಮುಖಾಂತರ ಒಂದು ಡಿಲಿಗೇಷನ್ ಮಾಡಿ ಕಳುಹಿಸಿ. ಅವರಿಗೆ ನಾವೆಲ್ಲಾ ಭಾರತೀಯರು ಎನ್ನುವುದನ್ನು ಅವರಿಗೆ ತೋರಿಸಿಕೊಡಬೇಕು ಎಂದು ಹೇಳುತ್ತೇನೆ.

† ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).—ಮಾನ್ಯ ಅಧ್ಯಕ್ಷರೇ, ಬೆಳಗಾಂನಲ್ಲಿ ಕನ್ನಡ ವನ್ನು ಕಲಿಯುವವರಿಗೆ ಮರಾಠಿಗರು ಬಹಳ ಕಿರುಕುಳ ಕೊಡುತ್ತಿದ್ದಾರೆ. ಇದು ಬಹಳ ಖಂಡನೀಯ ವಾದುದು. ಇದೇ ಕಾರಣದಿಂದ ಗಡಿ ಭಾಗದಲ್ಲಿ ಕನ್ನಡ ಕಡ್ಡಾಯವಿದ್ದುದನ್ನು ಹಿಂತೆಗೆದುಕೊಳ್ಳುವು

ದಾಗಿ ಸರ್ಕಾರದವರು ಹೇಳಿರುವುದೂ ಸಹ ಸರಿಯಲ್ಲ. ಇದರ ವಿರುದ್ಧ ಈಗ ಅಲ್ಲಿ ಕನ್ನಡಿಗರು ಆಮರಣ ಉಪವಾಸ ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಈ ರೀತಿ ಸತ್ಯಾಗ್ರಹ ಮಾಡುತ್ತಿರುವವರಿಗೆ ಸಹಾನುಭೂತಿ ತೋರಿಸುವ ಸಲುವಾಗಿ ಸರ್ಕಾರದವರು ಕೂಡಲೇ ಈ ಬಗ್ಗೆ ಒಂದು ಅಂತಿಮ ತೀರ್ಮಾನವನ್ನು ಕೈಕೊಳ್ಳಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಬಾಬುರೆಡ್ಡಿ ವಿ. ತುಂಗಲ್ (ಬೀಳಗಿ).—ಮಾನ್ಯ ಅಧ್ಯಕ್ಷರೇ, ಈ ಭಾಷೆಯ ಬಗ್ಗೆ ಮತ್ತು ಗಡಿ ಪ್ರದೇಶಗಳಲ್ಲಿ ವಾಸ ಮಾಡುತ್ತಿರುವ ಭಾಷಾ ಅಲ್ಪಸಂಖ್ಯಾತರ ಬಗ್ಗೆ ಉಭಯ ರಾಜ್ಯಗಳ ಮುಖ್ಯ ಮಂತ್ರಿಗಳು ಮಾತುಕತೆ ನಡೆಸುವುದಕ್ಕೆ ನನ್ನ ವಿರೋಧವಿಲ್ಲ. ಆದರೆ ಮಹಾರಾಷ್ಟ್ರದವರು ಯಾವ ವಿಚಾರಗಳಲ್ಲಿಯೂ ಸಹ ಮಾತು ಕೊಟ್ಟಂತೆ ಕರಾರುವಕ್ಕಾಗಿ ನಡೆದುಕೊಂಡಿಲ್ಲ. ಇದಕ್ಕೆ ಸಂಬಂಧ ಪಟ್ಟಂತೆ ಅನೇಕ ವದಂತಿಗಳು ಹುಟ್ಟಿಕೊಂಡವು. ಇದು ಪತ್ರಿಕೆಗಳಲ್ಲಿ ಸಹಾ ಪ್ರಕಟವಾಯಿತು. ಇದರ ಒಂದು ಪರಿಣಾಮವಾಗಿ ಕೆಲವರು ಕನ್ನಡ ನಾಮಫಲಕಗಳ ಮೇಲೆ ಟಾರನ್ನು ಬಳಿದರು. ಬೆಳಗಾಂನಲ್ಲಿರುವಂಥ ಕೊಡಲ್‌ಕರ್ ಗಲ್ಲಿಯು ಕನ್ನಡದ ಗುಂಡುಮೆಂಟ್ಟಿನ ಜಾಗ ಎಂದು ಹೆಸರು ಪಡೆದಿದೆ. ಇಂತಹ ಜಾಗದಲ್ಲಿ ಮರಾಠಿ ಭಾಷೆಯಲ್ಲಿ ಒಂದು ಬೋರ್ಡ್‌ನ್ನು ಹಾಕಿದ್ದಾರೆ. ಬಹುಶಃ ಚಂಡೀಗಢದಲ್ಲಿಯೂ ಸಹ ಇಂತಹ ಪ್ರಕರಣ ನಡೆದಿರುವುದಿಲ್ಲ. ಆದ್ದರಿಂದ ಸರ್ಕಾರ ಭಾಷೆ ವಿಚಾರದಲ್ಲಿ ಏನು ನಿಲುವು ತೆಗೆದುಕೊಂಡಿದೆ, ಆ ನಿಲುವಿನಿಂದ ಒಂದು ಇಂಚೂ ಸಹ ಹಿಂದೆ ಸರಿಯಬಾರದು. ಈಗ ಅಲ್ಲಿ ಕಳೆದ ೮ ದಿವಸಗಳಿಂದ ಕೆಲವರು ಏನು ಉಪವಾಸ ಸತ್ಯಾಗ್ರಹ ಮಾಡುತ್ತಿದ್ದಾರೆ, ಅವರ ಪೈಕಿ ಕೆಲವರು ಸತ್ತಿದ್ದಾರೆಂಬ ಪ್ರಚಾರ ಕೂಡ ಬೆಳಗಾಂನಲ್ಲಿ ನಡೆದಿದೆ. ಕನ್ನಡ ಭಾಷೆಯ ಬಗ್ಗೆ ನಾವು ಶ್ರೀ ಪಾಟೀಲ್ ಪುಟ್ಟಪ್ಪನವರಿಂದಾಗಲೀ, ಶ್ರೀ ಚಿದಾನಂದಮೂರ್ತಿ ಅವರಿಂದಾಗಲೀ, ಶ್ರೀ ವಾಟಾಳ್ ನಾಗರಾಜ್ ಅವರಿಂದಾಗಲೀ ಕಲಿಯಬೇಕಾಗಿಲ್ಲ. ಈಗ ಆಮರಣ ಸತ್ಯಾಗ್ರಹ ಮಾಡುತ್ತಿರುವವರ ಪೈಕಿ ಶ್ರೀ ಅಣ್ಣಪ್ಪ ಮುಮರಾಪುರ, ಶ್ರೀ ಗೋಪಾಲ ಘಂಟಿ, ಹಾಗೂ ಶ್ರೀ ಸದಾನಂದ ಭಂಡಾರಿ ಅವರ ದೇಹಸ್ಥಿತಿ ತುಂಬಾ ಚಿಂತಾಜನಕವಾಗಿದೆ ಎಂಬ ಸುದ್ದಿ ಬಂದಿದೆ. ಆದ್ದರಿಂದ ಮಾನ್ಯ ಬೊಮ್ಮಾಯಿ ಅವರು ಈ ದಿನ ಕಿತ್ತೂರ್ ಎಕ್ಸ್‌ಪ್ರೆಸ್ ಟ್ರೈನ್‌ನಲ್ಲಿ ಪ್ರವಾಸ ಹೋಗುತ್ತಿರುವುದರಿಂದ, ಅವರ ಜೊತೆಗೆ ನಾನು, ಶ್ರೀ ಕೆ. ಎಚ್. ಪಾಟೀಲ್ ಹಾಗೂ ಇನ್ನಿತರ ಸದಸ್ಯರೂ ಸಹ ಬರುತ್ತೇವೆ. ನಾವೆಲ್ಲರೂ ಸತ್ಯಾಗ್ರಹ ಮಾಡುತ್ತಿರುವವರ ಬಳಿ ಹೋಗಿ ಮಾತನಾಡೋಣ. ಅವರಿಗೆ ಒಪ್ಪಿಗೆಯಾಗುವ ರೀತಿಯಲ್ಲಿ ಈ ಸಮಸ್ಯೆಯನ್ನು ಬಗೆಹರಿಸೋಣ. ಈಗ ಸರ್ಕಾರ ಭಾಷೆಯ ಬಗ್ಗೆ ಏನು ನಿಲುವು ತೆಗೆದುಕೊಂಡಿದೆ. ಆ ನಿಲುವಿನಿಂದ ಯಾವ ಕಾಲಕ್ಕೂ ಮತ್ತು ಯಾವ ಸಂದರ್ಭದಲ್ಲಿಯೂ ಹಿಂದೆ ಸರಿಯಬಾರದೆಂದು ಹೇಳುತ್ತೇನೆ. ಈ ಮಾತನ್ನು ಅಲ್ಲಿ ಸತ್ಯಾಗ್ರಹ ಮಾಡುತ್ತಿರುವವರಿಗೆ ಹೋಗಿ ಹೇಳಿದರೆ ಅಲ್ಲಿ ಶಾಂತ ಪರಿಸ್ಥಿತಿ ನೆಲೆಸುತ್ತದೆ. ಆದ್ದರಿಂದ ಜವಾಬ್ದಾರಿಯುತ ಮಂತ್ರಿಗಳೊಬ್ಬರು ಅಲ್ಲಿಗೆ ಹೋಗಿ ಈ ಕೆಲಸ ಮಾಡಿದರೆ ಈ ಸತ್ಯಾಗ್ರಹ ನಿಲ್ಲುತ್ತದೆಂದು ಹೇಳುತ್ತೇನೆ.

† ಶ್ರೀ ಎಸ್. ಬಂಗಾರಪ್ಪ (ಸೊರಬ).—ಮಾನ್ಯ ಅಧ್ಯಕ್ಷರೇ, ಗಡಿ ಪ್ರದೇಶಗಳಲ್ಲಿ ಕನ್ನಡವನ್ನು ಶಾಲೆಗಳಲ್ಲಿ ಹೇಳಿಕೊಡುವ ಬಗ್ಗೆ ಮತ್ತು ಅಲ್ಲಿನ ಸರ್ಕಾರದ ಕಛೇರಿಗಳಲ್ಲಿ ಕನ್ನಡ ಭಾಷೆಯನ್ನು ಬಳಸುವುದರ ಬಗ್ಗೆ ನಾವು ಅನೇಕ ಸಲ ಚರ್ಚೆ ಮಾಡಿದ್ದೇವೆ. ಈಗ ಪ್ರತಿ ರಾಜ್ಯದಲ್ಲಿಯೂ ಭಾಷಾ ಅಲ್ಪಸಂಖ್ಯಾತರು ಏನಿದ್ದಾರೆ, ಅವರಿಗೆ ಅಲ್ಲಿನ ಸರ್ಕಾರಗಳು ಏನೇನು ಸೌಲಭ್ಯಗಳನ್ನು ಹಾಗೂ ರಕ್ಷಣೆಯನ್ನು ಸಂವಿಧಾನಬದ್ಧವಾಗಿ ಕಲ್ಪಿಸಿಕೊಟ್ಟಿವೆ ಎಂಬುದನ್ನು ಪರಿಶೀಲನೆ ಮಾಡಿ ಪ್ರತಿವರ್ಷವೂ ಒಂದು ವರದಿ ಕೊಡಬೇಕೆಂದು ಕೇಂದ್ರ ಸರ್ಕಾರ ಒಂದು ಸಮಿತಿಯನ್ನು ನೇಮಕ ಮಾಡಿದೆ. ನಮ್ಮ ಕರ್ನಾಟಕ ಗಡಿ ಪ್ರದೇಶಗಳಲ್ಲಿ ಮರಾಠಿ ಮಾತನಾಡುವ ಜನರು, ಉರ್ದು ಭಾಷೆ ಮಾತನಾಡುವ ಜನರು, ತಮಿಳು ಮಾತನಾಡುವ ಜನರು, ತೆಲುಗು ಮಾತನಾಡುವ ಜನರು ಇದ್ದಾರೆ. ಈ ಭಾಷಾ ಅಲ್ಪಸಂಖ್ಯಾತರಿಗೆ ಶಿಕ್ಷಣ ಕ್ಷೇತ್ರದಲ್ಲಿ ಹಾಗೂ ಇನ್ನಿತರ ಕ್ಷೇತ್ರಗಳಲ್ಲಿ ಕೆಲವೊಂದು ಸೌಲಭ್ಯಗಳನ್ನು ಕಲ್ಪಿಸಿಕೊಡಬೇಕಾಗುತ್ತದೆ. ಇವೊತ್ತು ಮಹಾರಾಷ್ಟ್ರದಲ್ಲಿ ಕಾಂಗ್ರೆಸ್ (ಐ) ಪಕ್ಷದ ಸರ್ಕಾರ ಇರಬಹುದು, ನಮ್ಮ ರಾಜ್ಯದಲ್ಲಿ ಜನತಾ ಪಕ್ಷದ ಸರ್ಕಾರ ಇರಬಹುದು, ಆದರೆ ಇಲ್ಲಿ ಗಡಿ ವಿಚಾರದ ಪ್ರಶ್ನೆ ಬಂದಾಗ ನಾವೆಲ್ಲರೂ ನಮ್ಮ ಪಕ್ಷಗಳನ್ನು ಮರೆತು ಒಂದೇ ರೀತಿಯಿಂದ ಮಾತನಾಡುತ್ತೇವೆ. ಇವೊತ್ತು ನಮ್ಮ ಗಡಿ ಪ್ರದೇಶಗಳಲ್ಲಿರುವಂಥ ಭಾಷಾ ಅಲ್ಪಸಂಖ್ಯಾತರಿಗೆ ಕರ್ನಾಟಕ ಸರ್ಕಾರ ಎಲ್ಲ ರೀತಿಯ ಸೌಲಭ್ಯಗಳನ್ನು ಮತ್ತು ರಕ್ಷಣೆಯನ್ನು ಕಲ್ಪಿಸಿಕೊಟ್ಟಿದೆ. ಇಲ್ಲಿ ಎಲ್ಲಾ ರೀತಿಯ ಸೌಲಭ್ಯಗಳು ಎಂದರೆ, ಅದು ಅಲ್ಲಿನ ಶಾಲೆಗಳಿಗೆ ಅಧ್ಯಾಪಕರನ್ನು ನೇಮಕ ಮಾಡುವುದು ಇರಬಹುದು, ಪಠ್ಯಪುಸ್ತಕಗಳನ್ನು ಒದಗಿಸುವುದು ಇರಬಹುದು,

ಅವರ ಹಕ್ಕುಗಳನ್ನು ಪಡೆಯುವ ವಿಚಾರ ಇರಬಹುದು, ಹಾಗೂ ಇನ್ನಿತರ ಸೌಲಭ್ಯಗಳನ್ನು ಒದಗಿಸು ವುದು ಇರಬಹುದು, ಇದನ್ನೆಲ್ಲಾ ನಮ್ಮ ಕರ್ನಾಟಕ ಸರ್ಕಾರ ಒದಗಿಸಿಕೊಟ್ಟಿದೆ ಎಂದು ಲಿಂಗ್ವಿಸ್ಟಿಕ್ ಮೈನಾರಿಟೀಸ್ ಕಮಿಷನ್ ಅವರು ತಮ್ಮ ವಾರ್ಷಿಕ ವರದಿಯಲ್ಲಿ ಉಲ್ಲೇಖ ಮಾಡಿದ್ದಾರೆ.

೧೧-೦೦ ಎ.ಎಂ.

ಇಷ್ಟಿದ್ದರೂ ಕೂಡ ಅಲ್ಲಿ ಗಡಿ ಪ್ರದೇಶದಲ್ಲಿ ಕನ್ನಡವನ್ನು ಕಲಿಯಬೇಕಾಗುತ್ತದೆ. ಕನ್ನಡ ಮಾತನಾಡತಕ್ಕವರು ಮಹಾರಾಷ್ಟ್ರದಲ್ಲಿದ್ದರೆ, ಮರಾಠಿ ಲಾಂಗ್ವೇಜನ್ನು ಕಲಿಯಬೇಕಾಗುತ್ತದೆ. ಒಂದು ಭಾಷೆಯ ಜ್ಞಾನಭಂಡಾರಕ್ಕೆ ಮತ್ತೊಂದು ಭಾಷೆ ಬಂದು ಸೇರಿಕೊಳ್ಳುತ್ತದೆ. ಮದ್ರಾಸಿನಲ್ಲಿ ವಾಸ ಮಾಡತಕ್ಕವರು ತಮಿಳು ಭಾಷೆಯನ್ನು ಕಲಿಯತಕ್ಕ ಅವಶ್ಯಕತೆ ಬರುತ್ತದೆ, ಮನೆಯಲ್ಲಿ ಕನ್ನಡ ಮಾತೃಭಾಷೆಯಾಗಿರುತ್ತದೆ. ಇಲ್ಲಿ ಕನ್ನಡ ಕಲಿಯಬೇಕಾಗುತ್ತದೆ. ಭಾಷಾ ಅಲ್ಪಸಂಖ್ಯಾತರಿಗೆ ರಕ್ಷಣೆ ಕೊಡುವುದು ಸಂವಿಧಾನದಲ್ಲಿ ಅಡಕವಾಗಿದೆ. ಇವತ್ತು ಈ ಭಾಷೆಯನ್ನು ಕಲಿತರೆ ಅವರಿಗೇ ಒಳ್ಳೆಯದು. ನೌಕರಿ ವಿಚಾರ ಬರಬಹುದು. ಅಥವಾ ವ್ಯವಹಾರಿಕ ವಿಚಾರ ಬರಬಹುದು, ಆ ದೃಷ್ಟಿಯಿಂದ ಕನ್ನಡವನ್ನು ಗಡಿ ಭಾಗಕ್ಕೆ ಸೇರಿದಂಥ ಜನ ಕಲಿಯತಕ್ಕದ್ದು ಉತ್ತಮ, ಕಡ್ಡಾಯ ಎಂದು ವಿಚಾರ ಮಾಡಿಯಾಗಿದೆ. ಮರಾಠಿ ಭಾಷೆಯನ್ನು ಕಲಿಯಬಾರದು ಎನ್ನುವ ವಿಚಾರವನ್ನು ಯಾರೂ ಇಟ್ಟಿಲ್ಲ. ಮರಾಠಿ ಭಾಷೆ ಕಲಿಯಲಿ, ಜೊತೆಗೆ ಕನ್ನಡವನ್ನೂ ಕಲಿಯಲಿ, ಏತಕ್ಕೆಂದರೆ ಅವರು ಕರ್ನಾಟಕದಲ್ಲಿದ್ದಾರೆ ಇವತ್ತು ಕನ್ನಡಿಗರು ಮಹಾರಾಷ್ಟ್ರದಲ್ಲಿದ್ದರೆ, ಕೇರಳದಲ್ಲಿದ್ದರೆ ಅಲ್ಲಿ ಕನ್ನಡ ಭಾಷಾ ವ್ಯವಸ್ಥೆಯನ್ನು ಅವರು ಮಾಡಬೇಕಾಗುತ್ತದೆ. ಜೊತೆಗೆ ಮರಾಠಿ ಭಾಷೆಯನ್ನು ಕಡ್ಡಾಯ ವಾಗಿ ಕಲಿಯಬೇಕು ಎನ್ನುವುದು ನನ್ನ ಅಭಿಪ್ರಾಯ. ಗಡಿ ಪ್ರದೇಶದಲ್ಲಿ ಕನ್ನಡ ವ್ಯವಸ್ಥೆಯನ್ನು ಏನು ಸರ್ಕಾರ ಮಾಡಿತ್ತು ಅದನ್ನೆಲ್ಲಾ ತೆಗೆದುಹಾಕಿದ್ದಾರೆ ಎನ್ನುವ ವಿಚಾರವನ್ನು ಒಂದು ವಾರ ಅಥವಾ ೧೦ ದಿವಸಗಳ ಹಿಂದೆ ಪತ್ರಿಕೆಯಲ್ಲಿ ನೋಡಿದ್ದೇನೆ. ನಿಜವಾಗಿ ಈ ಸದನದಲ್ಲಿ ಆ ವಿಚಾರ ಪ್ರಸ್ತಾಪಕ್ಕೆ ಬರಬೇಕಾಗಿತ್ತು. ಈಗಲೂ ಮುಖ್ಯಮಂತ್ರಿಗಳು ಮಾತುಕತೆ ನಡೆಸಿದರೆ ಒಳ್ಳೆಯದು. ಅವರುಗಳು ಒಂದು ಅತ್ಯುತ್ತಮ ತೀರ್ಮಾನಕ್ಕೆ ಬಂದು ಲಿಂಗ್ವಿಸ್ಟಿಕ್ ಮೈನಾರಿಟೀಸ್‌ಗೆ ಅಂದರೆ ಕನ್ನಡದವರಿಗೆ ರಕ್ಷಣೆ ನೀವು ಕೊಡಿ, ಮರಾಠಿ ಮಾತನಾಡತಕ್ಕವರಿಗೆ ನಾವು ಕೊಡುತ್ತೇವೆ ಎಂದು ತೀರ್ಮಾನವಾಗಲಿ. ಅವರೂ ನಮ್ಮ ಸಹೋದರ ಸಹೋದರಿಯರು, ಬೇರೆ ಯಾವುದೋ ದೇಶದವರು ಎಂಬ ದೃಷ್ಟಿಯಿಂದ ನಾವು ಯಾರೂ ಮಾತನಾಡತಕ್ಕದ್ದಲ್ಲ. ಬೇರೆ ದೇಶದ ಜೊತೆ ಸಂಧಾನ ಮಾಡುವುದು, ಪಾಕಿಸ್ತಾನದ ಅಧ್ಯಕ್ಷ ಜಿಯಾ-ಉಲ್-ಹಕ್‌ರವರೊಡನೆ ಪ್ರಧಾನಮಂತ್ರಿ ರಾಜೀವ್‌ಗಾಂಧಿಯವರು ಮಾತುಕತೆ ನಡೆಸಿದುದನ್ನು ಪತ್ರಿಕೆಯಲ್ಲಿ ತಿಳಿದುಕೊಳ್ಳತಕ್ಕ ಸಂದರ್ಭ ಇದ್ದಾಗ, ಮರಾಠಿ ಮಾತನಾಡತಕ್ಕವರಿಗೂ ನಮಗೂ ಹೊಡೆದಾಟ ಎಂದಿಗೂ ಕೂಡ ಸಲ್ಲದು, ಒಳ್ಳೆಯದಲ್ಲ. ಆದರೆ ಅಲ್ಲಿ ಅನಾವಶ್ಯಕವಾಗಿ ಹುಟ್ಟು ಹಾಕತಕ್ಕ ಕೆಲಸವನ್ನು ಕಿಡಿಗೇಡಿಗಳು ಮಾಡೇ ಮಾಡುತ್ತಾರೆ. ಅದರ ಬಗ್ಗೆ ಸರ್ಕಾರ ಗಮನ ಕೊಡ ಬೇಕಾಗುತ್ತದೆ. ಕೆಲವು ಸಾರಿ ರಾಜಕಾರಣಕ್ಕೆ ಇರಬಹುದು, ಭಾಷಾಂಧತೆ ಇರಬಹುದು, ವ್ಯಾಮೋಹ ಅತಿಯಾಗಿ ಅದೂ ಕೂಡ ಇದಕ್ಕೆ ಕಾರಣವಾಗಿರಬಹುದು. ದಯಮಾಡಿ ಅಂಥವರನ್ನು ತಹಬಂದಿಗೆ ತರತಕ್ಕದ್ದನ್ನು ತಕ್ಷಣ ವಿಚಾರ ಮಾಡಬೇಕು. ಅಲ್ಲಿ ಆಮರಣಾಂತ ಸತ್ಯಾಗ್ರಹ, ಉಪವಾಸ ಸತ್ಯಾಗ್ರಹ ಮಾಡಿ ಜೀವಕ್ಕೆ ಹಾನಿ ಆಗುವುದು ಇದೆಲ್ಲಾ ಒಳ್ಳೆಯದಲ್ಲ. ತಕ್ಷಣ ಮಾನ್ಯ ಬೊಮ್ಮಾಯಿ ಯವರು ಏನು ಮಾಡಬೇಕು ಅಂದರೆ ಅಲ್ಲಿಗೆ ಹೋಗಿ ಸತ್ಯಾಗ್ರಹ ಮಾಡುತ್ತಿರುವವರಿಗೆ ಸಮಾಧಾನ ಮಾಡಬೇಕಾಗುತ್ತದೆ, ಅವರಿಗೆ ತಿಳುವಳಿಕೆ ಕೊಟ್ಟು ಸಮಾಧಾನ ಮಾಡಬೇಕಾಗುತ್ತದೆ. ಸತ್ಯಾಗ್ರಹದ ಬಗ್ಗೆ ಹೇಳುವುದಾದರೆ, ಸತ್ಯಾಗ್ರಹವನ್ನು ಮಾಡುವವರು ಮಾಡುತ್ತಾರೆ, ಕಬ್ಬನ್ ಪಾರ್ಕಿನಲ್ಲಿ ಸತ್ಯಾಗ್ರಹ ಮಾಡುತ್ತಿರುತ್ತಾರೆ. ಅಲ್ಲಿ ಖಾಯಂ ಬೋರ್ಡ್ ಇದೆ. ಆ ಬೋರ್ಡನ್ನು ಯಾರೂ ಓದುವುದಕ್ಕೆ ಹೋಗುವುದಿಲ್ಲ ಎನ್ನುವ ಭಾವನೆ ಬಂದುಬಿಟ್ಟಿದೆ. ಆದರೆ ಇದು ಹಾಗಲ್ಲ, ನಿಜವಾಗಿ ಬೇಡಿಕೆ ಇದ್ದರೆ ಮಾನ್ಯತೆ ಮಾಡತಕ್ಕದ್ದು, ನೋಡತಕ್ಕದ್ದು ನಿಮ್ಮ ಕರ್ತವ್ಯವಾಗಿರುತ್ತದೆ. ಈ ವಿಷಯದ ಬಗ್ಗೆ ಮಾನ್ಯ ತಂಗಳ್‌ರವರು ಹೇಳಿದ್ದಾರೆ. ಹಾಗೆಯೇ ಇತರ ಮಾನ್ಯ ಸದಸ್ಯರೂ ಹೇಳಿ ದ್ದಾರೆ. ನಾನು ಸ್ವಲ್ಪ ತಡವಾಗಿ ಬಂದೆ, ಕ್ಷಮಿಸಬೇಕು. ತಕ್ಷಣ ಮಾನ್ಯ ಬೊಮ್ಮಾಯಿಯವರು

ಅಲ್ಲಿಗೆ ಹೋಗಿ ಅವರನ್ನು ಸಮಾಧಾನ ಮಾಡಬೇಕು. ಆಮೇಲೆ ಕನ್ನಡ ಕಡ್ಡಾಯವನ್ನು ತೆಗೆದಿದ್ದೇವೆ ಎಂದು ನಮ್ಮ ಮುಖ್ಯ ಮಂತ್ರಿಗಳು ಏಕೆ ಹೇಳಿಕೆ ಕೊಡಬೇಕು ? ಕನ್ನಡ ಟೈಪ್‌ರೈಟರ್ಸ್‌ಗೆ ಇಷ್ಟು ಹಣ ಕೊಡುತ್ತೇವೆ, ಇಷ್ಟೆಲ್ಲಾ ಮಾಡುತ್ತೇವೆ. ಹೀಗೆ ಹೇಳುವುದು ಏನು ತೋರಿಸುತ್ತದೆ ಎಂದರೆ, ಅಲ್ಲಿ ನಿಮ್ಮ ರಾಜಕೀಯ ದಾಳ ನಡೆಯುತ್ತಾ ಇರಬೇಕಾದರೆ ಅಲ್ಲಿ ಸ್ನೇಹ ಸಹ ಮಾಡಬೇಕು. ಮಾನ್ಯ ಸಭಾಧ್ಯಕ್ಷರೆ, ತಮ್ಮ ಮುಖಾಂತರ ಒಂದು ಎಚ್ಚರಿಕೆಯನ್ನು ಕೊಡುತ್ತೇನೆ.

ನೀವು ಯಾವಾಗಲೂ ಕನ್ನಡಿಗರು ಹಾಗೆ ಕೂತುಕೊಳ್ಳುತ್ತಾರೆಂದು ತಿಳಿದುಕೊಳ್ಳುವುದಕ್ಕೆ ಹೋಗ ಬೇಡಿ. ಮರಾಠಿ ಭಾಷೆಯ ವಿರುದ್ಧವಾಗಿ ನಾನು ಮಾತನಾಡುವುದಿಲ್ಲ. ಎಲ್ಲಾ ದೃಷ್ಟಿಯಿಂದಲೂ ಅವರು ಸಹೋದರರೆ. ಆದರೆ, ರಾಜಕಾರಣಕ್ಕಾಗಿ ಭಾಷೆಯನ್ನು ಉಪಯೋಗ ಮಾಡಿದರೆ, ಕನ್ನಡದ ಜನ, ಅವರು ಕಾಂಗ್ರೆಸಿಗರಿರಲಿ, ಜನತಾದವರಿರಲಿ, ಅವರನ್ನು ಯಾರೂ ಕಂಟ್ರೋಲ್ ಮಾಡುವುದಕ್ಕೂ ಆಗುವುದಿಲ್ಲ. ದಯಮಾಡಿ ಅಂಥಹ ಒಂದು ಅವಕಾಶವನ್ನು ಕೊಡಬೇಡಿ ಎನ್ನುವ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಮರಾಠಿ ಜನ ಬಂದಾಗ ಒಂದು ರೀತಿಯ ಹೇಳಿಕೆಯನ್ನು ಕೊಡುವುದಕ್ಕೆ ಹೋಗ ಬೇಡಿ. ಮಹಾರಾಷ್ಟ್ರದ ಮುಖ್ಯಮಂತ್ರಿಯವರು ಕನ್ನಡದ ಕಡ್ಡಾಯ ವಿಚಾರದಲ್ಲಿ ಎಷ್ಟು ಸವಲತ್ತು ಗಳನ್ನು ಕೊಟ್ಟಿದ್ದಾರೆ, ಶಿಕ್ಷಣ ಕೊಡಿಸುವ ವ್ಯವಸ್ಥೆ ಯಾವರೂಪದಲ್ಲಿ ಮಾಡಿದ್ದಾರೆನ್ನುವುದನ್ನು ತಾವು ನೋಡಿ. ಕರ್ನಾಟಕದೊಳಗೆ ಕನ್ನಡ ಕಡ್ಡಾಯವನ್ನು ತೆಗೆದುಹಾಕುತ್ತೇವೆನ್ನುವ ಮಾತು ನಿಮ್ಮ ಬಾಯಿಂದ ಬರುವುದಾದರೆ ನಿಮ್ಮಿಂದ ಕನ್ನಡ ಉದ್ಧಾರವಾಗುತ್ತದೆಯೋ ? ತೆಗೆದುಹಾಕಿದ್ದೇವೆ ಎನ್ನುವ ಅಭಿಪ್ರಾಯ ಕೊಟ್ಟಿದ್ದಾರೆ. ನಿಮ್ಮ ತಾಯಿ, ನಿಮ್ಮನುಡಿಯನ್ನು ಮೊದಲು ಪ್ರೀತಿ ಮಾಡಿ. ನಾನು ಸಭಾಧ್ಯಕ್ಷರ ಮುಖಾಂತರ ತಮ್ಮ ಗಮನಕ್ಕೆ ತರುವುದೇನೆಂದರೆ, ತತ್‌ಕ್ಷಣ ಆ ರೀತಿ ಹೇಳಿಕೆ ಕೊಟ್ಟಿದ್ದಾರೆಯೋ ಇಲ್ಲವೇ ಎಂಬ ಬಗ್ಗೆ ಮತ್ತೊಂದು ಸಾರಿ ಹೇಳಿ. ಕನ್ನಡ ಕಡ್ಡಾಯ ಮಾಡತಕ್ಕ ತೀರ್ಮಾನವನ್ನು ಮುಂದುವರಿಸಬೇಕು. ನಿಮ್ಮ ಕಡೆ ಹಾವೇರಿ ಪಂಚಾಯಿತಿ ಎಂದು ಕರೆಯುತ್ತಾರೆ, ಏತಕ್ಕೆ ಕರೆಯುತ್ತಾರೋ ಗೊತ್ತಿಲ್ಲ. ಹಾವು ಸಾಯಬಾರದು, ಕೋಲೂ ಮುರಿಯಬಾರದು. ಆ ರೀತಿ ಮಾಡುವುದಕ್ಕೆ ಹೋಗಿ ದಯವಿಟ್ಟು ಕನ್ನಡತನಕ್ಕೆ ಕೊಡಲಿಪೆಟ್ಟು ಹಾಕಬೇಡಿ ಎಂದು ಹೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಸಭಾಪತಿಗಳೇ, ಸದನದ ವಿರೋಧಪಕ್ಷದ ನಾಯಕರು, ಬೇರೆ ಬೇರೆ ಪಕ್ಷಗಳ ನಾಯಕರು ಹಾಗೂ ಸದಸ್ಯರುಗಳು ವ್ಯಕ್ತ ಮಾಡಿದ ಭಾವನೆಗಳನ್ನು ನಾನು ಅರ್ಥ ಮಾಡಿಕೊಂಡಿದ್ದೇನೆ. ನಾನು ಪ್ರಾರಂಭದಲ್ಲಿಯೇ ಸ್ಪಷ್ಟೀಕರಣ ಕೊಡಲಿಕ್ಕೆ ಬಯಸುತ್ತೇನೆ. ಸರ್ಕಾರದ ನಿಲುವು, ಮಹಾಜನ್ ವರದಿಯ ವಿಚಾರದಲ್ಲಿ ಮತ್ತು ಗಡಿ ವಿವಾದದ ಬಗ್ಗೆ ಸ್ಪಷ್ಟ ಇದೆ. ಹಿಂದೆ ಇದ್ದಂಥ ಸರ್ಕಾರ ಇರಲಿ, ಇವತ್ತು ನಮ್ಮ ಸರ್ಕಾರ ಇರಲಿ ಈ ಮಾನೆಯ ನಿರ್ಣಯ, ಕನ್ನಡ ನಾಡಿನ ಜನತೆಯ ನಿರ್ಣಯ ಏನಿದೆ ಅದನ್ನು ಸಂಪೂರ್ಣವಾಗಿ ಜಾರಿಗೆ ತರತಕ್ಕಂಥ ವಿಚಾರದಲ್ಲಿ ಯಾವುದೇ ಬದಲಾವಣೆ ಇಲ್ಲ. ಇದು ಸರ್ಕಾರದ ಸ್ಪಷ್ಟ ನಿಲುವು ಎಂಬುದನ್ನು ಈ ಸಮಯದಲ್ಲಿ ಹೇಳುವುದಕ್ಕೆ ಬಯಸುತ್ತೇನೆ. ನಮ್ಮ ಮುಂದೆ ಇರತಕ್ಕ ಪ್ರಶ್ನೆ ಬಹಳ ಸೀಮಿತವಾದದ್ದು. ಗೋಕಾಕ್ ಕಮಿಟಿ ವರದಿಯ ಆಧಾರದಮೇಲೆ ಭಾಷಾ ನೀತಿಯ ನಿರ್ಣಯವನ್ನು ಈಸದನ ೧೯೮೦ರಲ್ಲಿ ಒಮ್ಮತದಿಂದ ಪಾಸು ಮಾಡಿದೆ. ಅದಕ್ಕೆ ಅನುಗುಣವಾಗಿ ಆಜ್ಞೆಗಳು ಹೊರಟಿದ್ದು, ಅವು ಜಾರಿಯಲ್ಲಿವೆ. ಆ ನಿಲುವಿನಲ್ಲೂ, ಕೂಡ ಸರ್ಕಾರದ ಬದಲಾವಣೆ ಇಲ್ಲ. ಈ ಹಿನ್ನಲೆಯಿಂದ ನೋಡುವಾಗ, ಪ್ರಾಥಮಿಕ ಹಂತದಲ್ಲಿ ಆ ರಾಜ್ಯಗಳು ಭಾಷೆಯನ್ನು ಭಾಷಾ ಅಲ್ಪಸಂಖ್ಯಾತರಿಗೆ ಕಡ್ಡಾಯವಾಗಿ ಓದಿನ ಮೂಲಕ ತರತಕ್ಕಂಥ ವಿಚಾರದ ಬಗ್ಗೆ ಮಾತ್ರ ಸೀಮಿತವಾಗಿದೆ. ೧೯೬೦–೬೧ರಲ್ಲಿ ಮುಖ್ಯಮಂತ್ರಿಗಳ ಸಭೆ ಸೇರಿ, ಪ್ರಧಾನ ಮಂತ್ರಿಗಳು ಗೈಡ್‌ಲೈನ್ ಕೊಟ್ಟಿದ್ದಾರೆ. ರಾಜ್ಯಾಂಗದತ್ತವಾಗಿ ಅಲ್ಪ ಸಂಖ್ಯಾತರ ಆಯೋಗ ಕಾಲಕಾಲಕ್ಕೆ ನಿರ್ದೇಶನ ಕೂಡ ಕೊಡುತ್ತಾ ಬಂದಿದೆ. ಈ ಚಿಕ್ಕ ಪ್ರಶ್ನೆಯನ್ನು ತಾವು ನೋಡಬೇಕಾಗಿದೆ. ಮೊದಲನೆಯದಾಗಿ, ಆರ್ಟಿಕಲ್ ೩೫೦ರ ಮೇರೆಗೆ ಮುಖ್ಯಮಂತ್ರಿಗಳ ಸಭೆಯಲ್ಲಿ ಆದಂಥ ನಿರ್ಣಯಗಳಿಗನುಗುಣವಾಗಿ, ಆಜ್ಞೆಗಳು ಹೊರಟಿವೆ. ಇದರಲ್ಲಿ ಒಂದು ಭಾಗ ಮಾತ್ರ ಓದುತ್ತೇನೆ.

> "Provision of teaching at primary stage tnrough the mother tongue by appointing at least one teacher provided there are not less than 40 pupil speaking in that language in a school or 10% pupil in a class."

ಇವೊತ್ತು ಅಲ್ಲಿರತಕ್ಕ ವಿದ್ಯಾರ್ಥಿಗಳಿಗೆ ಶಿಕ್ಷಕರನ್ನು ಕೊಟ್ಟು ಅವರ ಭಾಷೆಯಲ್ಲಿ ಪ್ರಾಥಮಿಕ ಹಂತದಿಂದಲೇ ಶಿಕ್ಷಣ ಕೊಡಲಾಗಿದೆ. ಸಂವಿಧಾನದ ಪ್ರಕಾರ ನಡೆದುಕೊಳ್ಳಲೇಬೇಕಾಗುತ್ತದೆ. ಅದೇ ರೀತಿಯಲ್ಲಿ ನಮ್ಮ ಸರ್ಕಾರ ಕೂಡ ಅವರಿಗೆ ಸೌಲಭ್ಯಗಳನ್ನು ಒದಗಿಸಿದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ, ಮಾನ್ಯ ಖರ್ಗೆಯವರು ಹೇಳಿದಂತೆ, ಅಲ್ಪಸಂಖ್ಯಾತರಿಗೆ ಕೊಡಬೇಕಾದ ಎಲ್ಲಾ ಸೌಲಭ್ಯಗಳನ್ನು ಕೊಟ್ಟಿದೆ ಅದು ಪ್ರಾಥಮಿಕ ಶಾಲೆಯ ವಿಚಾರ ಇರಬಹುದು, ಹೈಸ್ಕೂಲು ವಿಭಾಗ ಇರಬಹುದು. ಇವೊತ್ತು ಗಡಿ ಭಾಗದಲ್ಲಿ ಅಂದರೆ ಬೆಳಗಾಂ ಇರಬಹುದು, ಬೀದರ್ ಇರಬಹುದು, ಕನ್ನಡ ಮತ್ತು ಮರಾಠಿಯಲ್ಲಿ ರೆಕಾರ್ಡ್ ಆಫ್ ರೈಟ್ಸ್ ಹಕ್ಕುಪತ್ರಗಳ ಬಗ್ಗೆ ಕಳೆದ ಹತ್ತಾರು ವರ್ಷಗಳಿಂದಲೂ ವ್ಯವಸ್ಥೆ ಮಾಡಿದ್ದೇವೆ. ಅದೇ ರೀತಿ ಶಾಲೆಗಳಿಗೂ ಕೂಡ ಶಿಕ್ಷಕರನ್ನು ಕೊಡತಕ್ಕ ವಿಚಾರದಲ್ಲಿ ಸಂಪೂರ್ಣವಾಗಿ ತೃಪ್ತಿಕರವಾಗಿ, ಕೆಲಸ ಮಾಡಿದೆ ಎಂದು ನಾವು ಹೇಳುವುದಿಲ್ಲ ಅಲ್ಪಸಂಖ್ಯಾತರ ಆಯೋಗ ಅನೇಕ ಸಾರಿ ಹೇಳಿದೆ. ಇವೊತ್ತು ಮಹಾರಾಷ್ಟ್ರದ ಗಡಿ ಭಾಗ ಇರಲಿ, ನಮ್ಮ ರಾಜ್ಯದ ಗಡಿ ಭಾಗ ಇರಲಿ, ಅದು ಶಾಲೆಯ ವಿಚಾರ ಇರಬಹುದು, ಅಭಿವೃದ್ಧಿ ಕಾರ್ಯದ ವಿಚಾರ ಇರಬಹುದು, ರಸ್ತೆ ವಿಚಾರ ಇರಬಹುದು, ಕುಡಿಯುವ ನೀರಿನ ವಿಚಾರ ಇರಬಹುದು, ವಿದ್ಯುಚ್ಛಕ್ತಿ ವಿಚಾರ ಇರಬಹುದು, ಗಡಿ ಭಾಗದ ಕನ್ನಡ ನಾಯಕರು ಅನ್ಯಾಯವಾಗಿರುವ ಬಗ್ಗೆ ಸರ್ಕಾರದ ಗಮನಕ್ಕೆ ಪದೇಪದೇ ತಂದಿದ್ದಾರೆ. ಈ ಎಲ್ಲಾ ಸಮಸ್ಯೆಗಳನ್ನು ನೋಡಿ ೧೯೮೩–೮೪ ಮತ್ತು ೧೯೮೪–೮೫ರಲ್ಲಿ ಕರ್ನಾಟಕ ರಾಜ್ಯದ ಮತ್ತು ಮಹಾರಾಷ್ಟ್ರದ ಮುಖ್ಯಮಂತ್ರಿಗಳು ಸಭೆ ಸೇರಿದಾಗ ಒಂದು ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಕರ್ನಾಟಕ ಮೂರು ಜನ ಉಚ್ಚ ಅಧಿಕಾರಿಗಳು, ಮಹಾರಾಷ್ಟ್ರದ ಮೂರು ಜನ ಉಚ್ಚ ಅಧಿಕಾರಿಗಳ ಒಂದು ಸಮಿತಿಯನ್ನು ನೇಮಿಸಿ, ಅವರು ಗಡಿ ಭಾಗದಲ್ಲಿ ಸಂಚರಿಸಿ, ಅಲ್ಲಿರತಕ್ಕ ಸಮಸ್ಯೆಗಳನ್ನು ಸರ್ಕಾರಕ್ಕೆ ವರದಿ ಮಾಡಬೇಕೆಂದು ತಿಳಿಸಲಾಗಿದೆ ಆ ವರದಿಯ ಆಧಾರದ ಮೇಲೆ ಉಭಯ ಸರ್ಕಾರಗಳು ಮುಂದಿನ ಕ್ರಮ ತೆಗೆದುಕೊಳ್ಳಬೇಕೆಂದು ನಿರ್ಣಯ ಮಾಡಿದೆವು. ಆ ನಿರ್ಣಯಕ್ಕೆ ಅನುಗುಣವಾಗಿ, ಅಧಿಕಾರಿಗಳ ಸಮಿತಿ ಸಂಚರಿಸಿ, ಸಮಸ್ಯೆಗಳೆಲ್ಲವನ್ನೂ ತಿಳಿದು ಒಂದು ವರದಿಯನ್ನು ಕೊಟ್ಟಿದ್ದಾರೆ. ಕನ್ನಡ ಶಾಲೆಗಳು ಎಷ್ಟು ಇವೆ, ಕನ್ನಡ ಶಿಕ್ಷಕರು ಎಷ್ಟು, ಮಕ್ಕಳು ಎಷ್ಟು ಇವೆ, ಹತ್ತು ವರ್ಷಕ್ಕಿಂತಲೂ ಹೆಚ್ಚಾಗಿರುವವರು, ಹತ್ತು ವರ್ಷಕ್ಕಿಂತಲೂ ಕಡಿಮೆ ಇರುವವರು, ಇವೆಲ್ಲದರ ಬಗ್ಗೆ ಸಮಗ್ರವಾಗಿ ವರದಿಯನ್ನು ಕೊಟ್ಟಿದ್ದಾರೆ. ನಮ್ಮ ಅಧಿಕಾರಿಗಳು ಕೊಟ್ಟಿರತಕ್ಕ ವರದಿ ನಮಗೆ ಬಂದಿದೆ. ಮಹಾರಾಷ್ಟ್ರದ ಅಧಿಕಾರಿಗಳು ಕೊಟ್ಟಿರತಕ್ಕ ವರದಿ ಅವರಿಗೆ ಹೋಗಿದೆ. ಆ ಒಂದು ವರದಿಯ ಆಧಾರದ ಮೇಲೆ ಉಭಯ ಮುಖ್ಯ ಮಂತ್ರಿಗಳು ಕೆಲವೊಂದು ನಿರ್ಣಯ ತೆಗೆದುಕೊಂಡಿದ್ದು, ಹಲವಾರು ಸೌಲಭ್ಯಗಳನ್ನು ಕೊಡತಕ್ಕದ್ದು ಎಂದು ನಿರ್ಧಾರ ಮಾಡಿದ್ದೇವೆ. ಮೊನ್ನೆ ಬೆಳಗಾಂನಲ್ಲಿ ಚಳುವಳಿ ಆದುದ್ದನ್ನು ನಾನು ಪುನ: ಇಲ್ಲಿ ಪ್ರಸ್ತಾಪ ಮಾಡಲಿಕ್ಕೆ ಹೋಗುವುದಿಲ್ಲ. ಉಭಯ ಮುಖ್ಯಮಂತ್ರಿಗಳು ಸಭೆ ಸೇರಿ ತೀರ್ಮಾನ ಮಾಡಿರುವುದನ್ನು ಓದುತ್ತೇನೆ. ಇದನ್ನು ಓದುವುದಕ್ಕೆ ಮೊದಲು ಮಾನ್ಯ ತಿಮ್ಮೇಗೌಡರು, ಮತ್ತು ಮಾನ್ಯ ಪಾಟೀಲ್‌ರವರು ಮಹಾರಾಷ್ಟ್ರದಲ್ಲಿ ಕನ್ನಡಿಗರು, ಅಲ್ಪಸಂಖ್ಯಾತರು ಏನು ಇದ್ದಾರೆ. ಅವರಿಗೆ ಏನು ಸೌಲಭ್ಯವನ್ನು ಅವರು ಕೊಟ್ಟಿದ್ದಾರೆ, ಅವರ ನೀತಿ ಏನು ಇದೆ, ಅದೇ ನೀತಿ, ಅದೇ ಸೌಲಭ್ಯವನ್ನು ಕರ್ನಾಟಕ ಸರ್ಕಾರ ಅನುಸರಿಸಬೇಕೆಂದು ಹೇಳಿದ್ದಾರೆ. ಅದು ಸರಿಯಾದಂಥ ಮಾತು. ಆ ಒಂದು ಮಾತನ್ನು ನಾನು ಗಮನದಲ್ಲಿಟ್ಟುಕೊಂಡು ಈ ಹೇಳಿಕೆಯನ್ನು ಇಲ್ಲಿ ಕೊಡಲಿಕ್ಕೆ ಇಷ್ಟಪಡುತ್ತೇನೆ.

I will read this:

"Sri Ramakrishna Hegde, Chief Minister of Karnataka, and Sri S.B. Chavan, Chief Minister of Maharashtra in a meeting held on Sahyadri to-day decided to solve the vexations and long pending problems in the border areas through a strict spirit of cordiality and reciprocal basis. In the meeting, Sri S.B. Chavan clarified that the Govt. of Maharashtra has also already decided not to make teaching of Marati compulsory up to VIIIth Standard in the Kannada Schools in the border areas. This step has been taken by

the Govt. of Maharashtra unilaterally on the expectation that the Karnataka would follow. Sri Hegde said that the principle of reciprocity has already been accepted and promised to issue appropriate orders after completing certain formalities by the end of 1986. Both the Chief Ministers added that the development works in the border areas which have been initiated should be expendited, and there should be no laxity in this regard. Under uncertainty about the future of the border areas. both agreed that irrespective of the State in which these areas will ultimately stand included, they are going to be part of one country and therefore development should not be halted. This is essential in the interest of the national integration."

ಮಾನ್ಯ ಅಧ್ಯಕ್ಷರೆ, ಹಿಂದೆ ಗೋಕಾಕ್ ಸಮಿತಿಯ ವರದಿಯ ಆಧಾರದ ಮೇಲೆ ನಮ್ಮ ರಾಜ್ಯ ಸರ್ಕಾರ ಒಂದು ಆಜ್ಞೆಯನ್ನು ಹೊರಡಿಸಿದೆ. ಇದನ್ನು ಹೊರಡಿಸಿರುವುದು ೧೯೮೦ರಲ್ಲಿ. ಅದರಲ್ಲಿ ಸ್ಪಷ್ಟವಾಗಿ ಹೇಳಿದ್ದೇವೆ. ಪ್ರಾಥಮಿಕ ಹಂತದಲ್ಲಿ ೧-೨-೩ನೇ ತರಗತಿಗಳಲ್ಲಿ ಕನ್ನಡ ಕಂಪಲ್ಸರಿ ಅಲ್ಲ. ಅನಂತರ ಕನ್ನಡವನ್ನು ಕಂಪಲ್ಸರಿ ಮಾಡಬೇಕೆಂದು ಇದೆ. ಇದು ರಾಜ್ಯಾಂಗದಲ್ಲಿದೆ. ಇದನ್ನು ಎಲ್ಲಾ ಮುಖ್ಯಮಂತ್ರಿಗಳೂ ಒಪ್ಪಿಕೊಂಡಿದ್ದಾರೆ. ಈ ಆಜ್ಞೆ ಹೊರಟ ಮೇಲೆ ಪುನಃ ಮತ್ತೊಂದು ಆಜ್ಞೆಯನ್ನು ಹೊರಡಿಸಿ ಅದರಲ್ಲಿ ಕನ್ನಡವನ್ನು ಕಂಪಲ್ಸರಿ ಮಾಡಬೇಕೆಂದು ತಿಳಿಸಲಾಗಿತ್ತು. ಇದರ ಬಗ್ಗೆ ಚರ್ಚೆ ನಡೆಯಿತು. ಮಹಾರಾಷ್ಟ್ರ ಸರ್ಕಾರದವರೂ ಕೂಡ ಇಂಥ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ. ನಮ್ಮ ಮುಖ್ಯಮಂತ್ರಿಗಳು ಮಹಾರಾಷ್ಟ್ರದ ಮುಖ್ಯಮಂತ್ರಿಗಳ ಗಮನಕ್ಕೆ ಇದನ್ನು ತಂದಾಗ ಅಲ್ಲಿನ ಮುಖ್ಯ ಮಂತ್ರಿಗಳು ಇನ್ನೊಂದು ಆಜ್ಞೆಯನ್ನು ಹೊರಡಿಸಿದ್ದಾರೆ. I will read the Order dated 28th July, 1986. It reads thus:

"The question of teaching Marathi language in the areas of the State on the border of Karnataka and Maharashtra States was reviewed by the Government and after careful consideration and with a View to create an atmosphere of mutual understandig in the border areas' the Govt of Maharashtra took a decision that from the academic year 1986-87 teaching of marathi will be completely optional in Standards I to VIII in Kannada medium primary and upper primary schools situated in the border areas of Maharashtra-Karnataka States. The facility of teaching marathi would be available in these schools only if the parents or students studying in those schools make such requests in writing.

x x x

For the purpose of this order, South Solapure, Akkalkot, Mangalwadha Taluk of Solapur District, Jat Taluk of sangli District and Gadhinglaj Taluk of Kolhapur District, which will be treated as the area..."

ಆ ಏರಿಯಾದಲ್ಲಿ ಕನ್ನಡವನ್ನು ಕಂಪಲ್ಸರಿಯಾಗಿ ಕಲಿತುಕೊಳ್ಳಬೇಕೆಂಬ ಆಜ್ಞೆಯನ್ನು ಹಿಂದಕ್ಕೆ ತೆಗೆದು ಕೊಂಡಿದ್ದೇವೆ. ಯಾರು ಮರಾಠಿಯನ್ನು ಕಲಿಯುವುದಕ್ಕೆ ಇಚ್ಛೆಪಡುತ್ತಾರೆ, ಅವರಿಗೆ ಅನುಕೂಲ ಮಾಡಿಕೊಟ್ಟಿದ್ದೇವೆ.

ಶ್ರೀ **ಮಲ್ಲಾರಿಗೌಡ ಎಸ್. ಪಾಟೀಲ್.**— ಅಲ್ಲಿ ಕನ್ನಡ ಶಾಲೆಗಳೇ ಇಲ್ಲ. ಇನ್ನು ಕನ್ನಡವನ್ನು ಎಲ್ಲಿ ಕಲಿಸುತ್ತಾರೆ.?

ಶ್ರೀ ಬಾಬುರೆಡ್ಡಿ ವಿ. ತುಂಗಳ್.— ಮಹಾರಾಷ್ಟ್ರದಲ್ಲಿ ಕನ್ನಡ ಶಾಲೆಗಳೇ ಇಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.— ಅಲ್ಲಿ ಎಷ್ಟು ಶಾಲೆಗಳಿವೆ ಎಂಬುದನ್ನು ಅಂಕಿಅಂಶಗಳನ್ನು ಕೊಡುತ್ತೇನೆ. ಮಹಾರಾಷ್ಟ್ರ ಸರ್ಕಾರ ಆಜ್ಞೆಯನ್ನು ಹೊರಡಿಸಿದಮೇಲೆ ನಾವು ನಮ್ಮ ಬಾರ್ಡರ್‌ನಲ್ಲಿ ಎಷ್ಟು ಕಂಪಲ್ಸರಿ ಮಾಡಬೇಕು. ಎಷ್ಟು ಬದಲಾವಣೆ ಮಾಡಬೇಕು, ಯಾವ ಯಾವ ಹಳ್ಳಿಗಳಿಗೆ ಎಂದು ನಾವು ನಿರ್ಣಯ ಮಾಡಬೇಕಾಗಿದೆ

ನಾನು ಸತ್ಯಾಗ್ರಹ ಮಾಡತಕ್ಕಂಥ ಬಂಧುಗಳಿಗೆ ಹೇಳಬಯಸುತ್ತೇನೆ, ಸರ್ಕಾರ ಇನ್ನೂ ಯಾವ ನಿರ್ಣಯವನ್ನು ತೆಗೆದುಕೊಂಡಿಲ್ಲ. ಮಹಾರಾಷ್ಟ್ರ ಸರ್ಕಾರದವರ ಆಜ್ಞೆಯಾದ ಮೇಲೆ ನಾವು ಮಹಾರಾಷ್ಟ್ರದಲ್ಲಿರತಕ್ಕಂಥ ಗಡಿನಾಡ ಕನ್ನಡ ನಾಯಕರನ್ನು ಕರೆದು ಮಾತನಾಡಿದ್ದೇವೆ. ನಾವು ನಮ್ಮ ಮಕ್ಕಳಿಗೆ ಕನ್ನಡವನ್ನು ಕಡ್ಡಾಯ ಮಾಡತಕ್ಕಂಥ ವ್ಯವಸ್ಥೆಯನ್ನು ಮಾಡುವಾಗ ಅದೇ ರೀತಿಯಲ್ಲಿ ಗಡಿನಾಡಿನಲ್ಲಿರತಕ್ಕಂಥ ಅವರ ತೊಂದರೆಗಳನ್ನು ಕೂಡ ಗಮನದಲ್ಲಿಟ್ಟುಕೊಂಡು ನಿರ್ಣಯವನ್ನು ತೆಗೆದುಕೊಳ್ಳಬೇಕಾಗುತ್ತದೆ. ಕಾಸರಗೋಡೇ ಇರಬಹುದು ಅಥವಾ ಯಾವುದೇ ಭಾಗವಿರಬಹುದು ಒಂದು ನಿರ್ಣಯವನ್ನು ತೆಗೆದುಕೊಳ್ಳುವಾಗ ಗಡಿ ಭಾಗದ ಹಿತರಕ್ಷಣೆಯನ್ನೂ ಕೂಡ ಗಮನದಲ್ಲಿಟ್ಟುಕೊಳ್ಳಬೇಕು. ಈ ದೃಷ್ಟಿಯಿಂದ ಈಗಿರತಕ್ಕಂಥ ಕನ್ನಡ ಗಡಿ ಏನು ಇದೆ ಅಲ್ಲಿರತಕ್ಕ ಜನರ ಸಮಸ್ಯೆಯನ್ನೂ ನೋಡಬೇಕು. ಈ ಬಗ್ಗೆಯೂ ಕೂಡ ಸರ್ಕಾರದವರು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಅವರು ಸತ್ಯಾಗ್ರಹ ಮಾಡುವುದಕ್ಕೆ ಯಾವ ಕಾರಣವೂ ಇಲ್ಲವೆಂದು ಸ್ಪಷ್ಟವಾಗಿ ಹೇಳುತ್ತೇನೆ. ಕನ್ನಡ ನಾಯಕರ ಭಾವನೆ ಮತ್ತು ಸದಸ್ಯರ ಭಾವನೆಯನ್ನು ಗಮನದಲ್ಲಿಟ್ಟು ರಾಜಕಾರಣದಲ್ಲಿರುವುದನ್ನೂ ಕೂಡ ಗಮನದಲ್ಲಿಟ್ಟುಕೊಂಡು ಸರ್ಕಾರ ನಿರ್ಣಯವನ್ನು ತೆಗೆದುಕೊಳ್ಳುತ್ತದೆಂದು ಸ್ಪಷ್ಟವಾಗಿ ಹೇಳಿ ಯಾರಿಗೂ ಅನ್ಯಾಯವಾಗದ ರೀತಿಯಲ್ಲಿ ನಿರ್ಣಯವನ್ನು ತೆಗೆದುಕೊಳ್ಳುತ್ತೇವೆ. ಉಪವಾಸ ಮಾಡತಕ್ಕಂಥ ಕನ್ನಡ ನಾಯಕರು ಉಪವಾಸವನ್ನು ಬಿಡಬೇಕು. ನಾವು ಅಂತಿಮ ತೀರ್ಮಾನ ತೆಗೆದುಕೊಳ್ಳುವ ಮೊದಲು ಅವರು ಬೆಂಗಳೂರಿಗೆ ಬರುವುದಕ್ಕೆ ಕೇಳಿಕೊಳ್ಳುತ್ತೇನೆ. ಅಂತಿಮ ನಿರ್ಣಯವನ್ನು ತೆಗೆದುಕೊಳ್ಳುವ ಭರವಸೆಯನ್ನು ಅವರಿಗೆ ಕೊಡುತ್ತೇನೆ. ಮಾನ್ಯ ಸದಸ್ಯರಾದ ತುಂಗಲ್ ಅವರು ಬೆಳಗಾಂಗೆ ಹೋಗುವುದು ಬಹಳ ಅವಶ್ಯಕತೆ ಇದೆ ಎಂದು ಹೇಳಿರುತ್ತಾರೆ. ಮಾನ್ಯ ಮುಖ್ಯಮಂತ್ರಿಗಳು ಬಂದ ಮೇಲೆ ಅವರ ಜೊತೆಯಲ್ಲಿ ಚರ್ಚೆ ಮಾಡಿ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳುತ್ತೇನೆ. ದಯವಿಟ್ಟು, ಅವರು ಉಪವಾಸ ಸತ್ಯಾಗ್ರಹವನ್ನು ನಿಲ್ಲಿಸಬೇಕು. ಸ್ಪಷ್ಟವಾದ ಸರ್ಕಾರದ ನಿರ್ಣಯ ಇದೆ. ಕನ್ನಡ ಜನತೆಯ ಆದೇಶವಿದೆ. ಅದಕ್ಕೆ ತಲೆಬಾಗಿ ನಡೆಯತಕ್ಕಂಥ ನಿರ್ಣಯ ಇದೆ. ಅದರಲ್ಲಿ ಬೇರೆ ಪ್ರಶ್ನೆಯೇ ಇಲ್ಲವೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಮಾನ್ಯ ಸಭಾಧ್ಯಕ್ಷರೇ, ಸರ್ಕಾರದ ಉತ್ತರವನ್ನು ಕೇಳಿದ್ದು ಆಯಿತು. ಗಡಿಭಾಗದಲ್ಲಿ ಕಾನೂನು ರಕ್ಷಣೆ ಮಾಡುವ ಕ್ರಮ ಹಾಕಿಕೊಳ್ಳುತ್ತೀರಾ? ಕನ್ನಡಿಗರಿಗೆ ಯಾವ ರೀತಿಯಲ್ಲೂ ನೋವಾಗದಂತೆ ನೋಡಿಕೊಳ್ಳುತ್ತೀರಾ? ಈ ಪ್ರಶ್ನೆಗೆ ಯಾವಾಗ ಉತ್ತರ ಹೇಳುತ್ತೀರಿ ಎನ್ನುವುದು ಬಹಳ ಮುಖ್ಯ. ಏತಕ್ಕೆಂದರೆ ಈ ಸದನ ದಿನಾಂಕ ೪-೫ಕ್ಕೆ ಮುಕ್ತಾಯವಾಗಲಿದೆ. ಈಗ ಮಾನ್ಯ ಮುಖ್ಯಮಂತ್ರಿಗಳು ಊರಲ್ಲಿ ಇದ್ದಾರೋ ಇಲ್ಲವೋ ಗೊತ್ತಿಲ್ಲ. ಒಂದು ವೇಳೆ ಅವರು ಊರಲ್ಲಿ ಇಲ್ಲದಿದ್ದರೆ, ಅವರು ಬಂದ ಕೂಡಲೇ ಅವರೊಡನೆ ಮಾತನಾಡಿ ತತ್‌ಕ್ಷಣ ಮುಂದಿನ ವಾರದಲ್ಲಿ ಅಂತಿಮ ನಿರ್ಣಯವನ್ನು ತೆಗೆದುಕೊಳ್ಳುತ್ತೀರಾ? ಮಹಾರಾಷ್ಟ್ರದಲ್ಲಿ ಕಾವಲು ಸಮಿತಿಯವರು ತೀರ್ಮಾನ ಮಾಡತಕ್ಕಂಥ ವಿಚಾರದಲ್ಲಿ ಇರುತ್ತಾರೆ. The ball is in your court now. It is rather in the court of our Government. ತಾವು ತೀರ್ಮಾನ ಮಾಡುವುದರಲ್ಲಿ ತಡಮಾಡಬಾರದು. ತಪ್ಪು ಮಾಡಿದರೆ Your Government will have to be held **responsible.**

ಶ್ರೀ ಎಸ್. ಆರ್. ಬೊಮ್ಮಾಯಿ.— ಕನ್ನಡಕ್ಕೆ ಧಕ್ಕೆ ಬರತಕ್ಕಂಥ ಪ್ರಶ್ನೆಯೇ ಇಲ್ಲ. ನಾವು ಯಾವುದೇ ನಿರ್ಣಯವನ್ನು ತೆಗೆದುಕೊಂಡಿಲ್ಲ. ಕನ್ನಡ ಸಮಿತಿಯ ನಾಯಕರು ಇರುತ್ತಾರೆ ಅವರನ್ನು ಕರೆದು ಮಾತನಾಡುತ್ತೇವೆ.

ಶ್ರೀ ಕೆ. ಎಚ್. ಪಾಟೀಲ್.— ಅವರಿಗೆ ಅವರು ಮಾಡುವ ಕೆಲಸವನ್ನು ಬಿಟ್ಟು ಮತ್ತೊಂದರ ಕೆಲಸವನ್ನು ಹಚ್ಚುತ್ತಿದ್ದೀರಿ. ಅವರ ಕೈಯಲ್ಲಿ ಕೆಲಸ ಕೊಡಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ಕನ್ನಡ ಕಾವಲು ಸಮಿತಿಯ ಚಳುವಳಿ ನಾಯಕರಿಗೆ ಹೇಳುತ್ತಿರುವುದು ಇಷ್ಟೇ. ಗಡಿನಾಡು ಅಲ್ಪಸಂಖ್ಯಾತರ ಸಮಸ್ಯೆಯ ಬಗ್ಗೆ ಒಂದು ಸಬ್ ಕಮಿಟಿಯನ್ನು ಮಾಡಿದ್ದೇವೆ. ಮಹಾರಾಷ್ಟ್ರ ಮತ್ತು ಕರ್ನಾಟಕ ಸರ್ಕಾರದ ಅಧಿಕಾರಿಗಳು ಕೂಡಿದ ಒಂದು ಕಮಿಟಿ ಇರುತ್ತದೆ. ಅವರು ಅಲ್ಲಿ ಏನೇನು ಸಮಸ್ಯೆಗಳು ಇರುತ್ತವೆ ಅದರ ಬಗ್ಗೆ ವರದಿಯನ್ನು ಸಲ್ಲಿಸಬೇಕು. ಶಾಲೆಗಳನ್ನು ಕೊಡುವ ಬಗ್ಗೆ ಟೀಚರ್ಸ್‌ನ್ನು ಕೊಡದೆ ಇರುವ ಬಗ್ಗೆ ಇರಬಹುದು ಅವರು ವರದಿಯನ್ನು ಸರ್ಕಾರಕ್ಕೆ ಕೊಡಬೇಕು. ಆಯಾ ಸರ್ಕಾರ ಇಂಪ್ಲಿಮೆಂಟ್ ಮಾಡತಕ್ಕಂಥ ನಿರ್ಣಯ ತೆಗೆದುಕೊಳ್ಳುತ್ತದೆ; ಆಫೀಸರ್‌ಗಳ ಒಂದು ಸಮಿತಿಯನ್ನು ಈಗಾಗಲೇ ನೇಮಿಸಿದ್ದೇವೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಕರೆಸಿ ಮಾತನಾಡುತ್ತೀರಾ?

ಶ್ರೀ ಎಸ್. ಬಂಗಾರಪ್ಪ.— ನಾನು ಮಾನ್ಯ ಸಚಿವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಆದಷ್ಟು ಜಾಗ್ರತೆಯಾಗಿ ಕರೆಸಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ಬೇಗ ಕರೆಸಿಕೊಂಡು ಮಾತನಾಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಮುಂದಿನ ವಾರ ಕಳುಹಿಸಿ ಕರೆಸುತ್ತೀರಾ?

ಶ್ರೀ ಎಸ್. ಆರ್. ಬೊಮ್ಮಾಯಿ.— ಮುಖ್ಯಮಂತ್ರಿಗಳು ಬಂದಮೇಲೆ ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.— ಅದಕ್ಕಿಂತ ಮುಂಚೆಯೇ ಕರೆಸಿ.

ಶ್ರೀ ಬಾಬುರೆಡ್ಡಿ ವಿ.ತುಂಗಳ್.— ಅಲ್ಲಿ ಅವರು ಅಮರಣಾಂತರ ಉಪವಾಸ ಸತ್ಯಾಗ್ರಹ ಕುಳಿತಿದ್ದಾರೆ.

ಶ್ರೀ ಎಸ್.ಆರ್- ಬೊಮ್ಮಾಯಿ.— ಅವರೇ ಹೋಗಿ ಮನವಿ ಮಾಡಿಕೊಳ್ಳಲಿ.

ಶ್ರೀ ಮಲ್ಲಿಕಾರ್ಜುನ ಎಂ ಖರ್ಗೆ.—ಮುಖ್ಯ ಮಂತ್ರಿಗಳು ಬಂದ ಮೇಲೆ ಸೂಕ್ತ ದಿನಾಂಕ ಗೊತ್ತು ಮಾಡಿ ಹೇಳುತ್ತೀರಾ?

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಅವರ ಪರಿಸ್ಥಿತಿ ಚಿಂತಾಜನಕವಾಗಿದೆ. ಸರ್ಕಾರದ ವತಿಯಿಂದ ದೂತರನ್ನು ಕಳುಹಿಸಿ ಉಪವಾಸ ಸತ್ಯಾಗ್ರಹ ಕೈಬಿಡುವಂತೆ ಹೇಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.— ಮಾನ್ಯ ಸದಸ್ಯರೇ ಅವರಿಗೆ ಹೋಗಿ ಮನವಿ ಮಾಡಿಕೊಳ್ಳಲಿ. ಅವರಿಗೆ ಆಮಂತ್ರಣ ಕೊಡೋಣ.

ಶ್ರೀ ಎಸ್, ಬಂಗಾರಪ್ಪ.—ಅವರಿಗೆ ಅಂಟಿಸುವುದೇ?

ಶ್ರೀ ಬಾಬುರೆಡ್ಡಿ ವಿ. ತುಂಗಳ್—ಕನ್ನಡ ಕಾವಲು ಸಮಿತಿಯ ಅಧ್ಯಕ್ಷರು ನಮ್ಮನ್ನು ಕಾಯುವುದು ಬಿಟ್ಟು ಅವರನ್ನು ಕಾಯಲಿ.

ಶ್ರೀ ಎಸ್. ಬಂಗಾರಪ್ಪ.—ಅದು ಒಳ್ಳೆಯ ಸಲಹೆ.

ಶ್ರೀ ಕೆ.ಹೆಚ್. ಪಾಟೀಲ್.—ಡಿವಿಜನಲ್ ಕಮೀಷನರ್ ಇದ್ದಾರೆ. ಅವರಿಗೆ ಸಚಿವರು ಫೋನ್ ಮಾಡಿ ಸರ್ಕಾರದ ವತಿಯಿಂದ ಹೋಗತಕ್ಕ ವ್ಯವಸ್ಥೆ ಮಾಡಬೇಕು. ನಮಗೆ ಸಹಾನುಭೂತಿ ಇದೆ, ಉಪವಾಸವನ್ನು ಬಿಡಿ, ಆ ಬಗ್ಗೆ ನಾವು ಜವಾಬ್ದಾರಿ ತೆಗೆದುಕೊಳ್ಳುತ್ತೇವೆಂದು ಹೇಳಬೇಕು.

ಶ್ರೀ ಎಸ್. ಆರ್. ಬೊಮ್ಮಾಯಿ.—ಮಾನ್ಯ ಪಾಟೀಲರು ಏನು ಸಲಹೆ ಕೊಟ್ಟಿದ್ದಾರೆ ಅದನ್ನು ಮಾಡೋಣ.